# ಅಪರಂಜಿ

ತಿಳಿನಗೆಯ ಕಾರಂಜಿ



ನವೆಂಬರ್ - 2013



ರಾಜ್ಯೋತ್ಸವ ವಿಶೇಷ



ನವೆಂಬರ್ 14 ರಿಂದ ಸ್ವಲ್ಪ ದಿನ ನಾನು ಬ್ಯುಸಿ. ಸಚಿನ್ ಕೊನೆ ಟೆಸ್ಟ್ ನೋಡಬೇಕಿದೆ. ಆಗ ನನ್ನನ್ನು ಯಾರೂ ಡಿಸ್ಟರ್ಬ್ ಮಾಡಬಾರದು. ತಿಳಿಯಿತೆ?



# ಅಪರಂಜಿ

ತಿಳಿನಗೆಯ ಕಾರಂಜಿ





ಸಂಪಾದಕ ಮಂಡಳಿ

ಸಂಪಾದಕರು
ಶ್ರೀ ಎಂ. ಶಿವಕುಮಾರ್

ಉಪ ಸಂಪಾದಕರು
ಶ್ರೀ ಬೇಲೂರು ರಾಮಮೂರ್ತಿ

ಶ್ರೀ ಎಚ್.ಎನ್. ಆನಂದ
ಶ್ರೀ ಎಚ್. ಗೋಪಾಲಕೃಷ್ಣ

ಟ್ರಸ್ಟಿಗಳು
ಶ್ರೀ ಎಂ. ಶಿವಕುಮಾರ್
ಶ್ರೀ ಬೇಲೂರು ರಾಮಮೂರ್ತಿ
ಶ್ರೀ ಜಿ. ನಾಗೇಶ್
ಶ್ರೀ ವಿ.ಆರ್. ನಾಥ್
ಶ್ರೀ ಎ.ಆರ್. ರಾಜಗೋಪಾಲ್
ಶ್ರೀ ಕೆ. ರವೀಂದ್ರ ರಾವ್

ವಿಶೇಷ ಆಹ್ವಾನಿತರು
ಶ್ರೀ ಆರ್. ಶೇಷಗಿರಿರಾವ್
ಶ್ರೀ ಆರ್.ಎಸ್. ಪ್ರಶಾಂತ್

ಗೌರವ ಸಲಹೆಗಾರರು
ಶ್ರೀ ಅ.ರಾ.ಸೇ.



**ಚಂದಾ ವಿವರ:**
ಬಿಡಿ ಪ್ರತಿ: ರೂ. 10/-
ವಾರ್ಷಿಕ ಚಂದಾ: ರೂ. 100/-
ಹತ್ತು ವರ್ಷದ ಚಂದಾ: ರೂ. 750/-

ಸಂಪರ್ಕ ಸಮಯ:
ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ





**ಸಂಪುಟ 31**
**ಸಂಚಿಕೆ – 2**
**ನವೆಂಬರ್ – 2013**


## ಈ ಸಂಚಿಕೆಯಲ್ಲಿ.....

**ರಾಜ್ಯೋತ್ಸವ ವಿಶೇಷ**


| | | |
|---|---|---|
| ಅಪರಂಜಿ ಕಿಡಿ | **ಪ್ರಕಾಶ್** | 2 |
| ತದ್ರೂಪಿ ಪ್ರಸಂಗ | **ವತ್ಸಸ** | 3 |
| ಮಾಸದ ಕನ್ನಡ | **ಅ.ರಾ. ಮಿತ್ರ** | 8 |
| ಎಲ್ಲೆಲ್ಲೂ ನಗುವಿದೆ... | **ಎಚ್.ಜಿ. ಸೋಮಶೇಖರ ರಾವ್** | 11 |
| ರಂಗವ್ವನ ರೇಷ್ಮೆ ಸೀರೆ | **ವೈ.ಎನ್. ಗುಂಡೂರಾವ್** | 16 |
| ಅಕ್ಟೋಬರ್ ಆಘಾತ | **ಸಿ.ಆರ್. ಸತ್ಯ** | 21 |
| ಸಚಿನ್ ಎಂಬ.... | | 25 |
| ಅಜ್ಜಿಗೂ ಅಂಟಿತು ಫೇಸ್... | **ಆರತಿ ಘಟಿಕಾರ್** | 27 |
| ತುಂತುರು | **ದಂನಾಳ** | 34 |
| ಹುರುಳಿಕಟ್ಟು | **ಎಚ್. ಗೋಪಾಲಕೃಷ್ಣ** | 36 |
| ಶುದ್ಧ ಅಸುದ್ದಿ | **ಎಚ್ಚೆನ್ಎ** | 39 |


**ಮುಖಪುಟ ವ್ಯಂಗ್ಯಚಿತ್ರ – ಗುಜ್ಜಾರ್**


*ಮುದ್ರಣ:* ರವಿ ಗ್ರಾಫಿಕ್ಸ್ – *ಅಕ್ಷರ ಜೋಡಣೆ:* ಒಮೇಗಾ ಲೇಸರ್‌ಟೆಕ್
*ಪ್ರಕಾಶಕರು:* ಕೊರವಂಜಿ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯರಸ್ತೆ, ಮಲ್ಲೇಶ್ವರಂ,
ಬೆಂಗಳೂರು – 560 003. email: koravanji42@hotmail.com



*ಸಂಪರ್ಕ ವಿಳಾಸ:* **ಶ್ರೀ ಬೇಲೂರು ರಾಮಮೂರ್ತಿ**, ಉಪ ಸಂಪಾದಕರು, ಅಪರಂಜಿ ಮಾಸಪತ್ರಿಕೆ,
ನಂ. 96, 'ಸುಕೇಶವ' ಎರಡನೇ ಅಡ್ಡರಸ್ತೆ, 20ನೇ ಮುಖ್ಯರಸ್ತೆ, ಮೊದಲನೇ ಫೇಸ್, ಬಿ.ಟಿ.ಎಂ. ಲೇಔಟ್,
ಬೆಂಗಳೂರು – 560 068. ದೂರವಾಣಿ: 080-26688488. email: belururamamurthy@gmail.com

# ಅಪರಂಜಿ ಕಿಡಿ

● ಪ್ರಕಾಶ್



ಜೆ.ಡಿ.ಎಸ್. ಕಟ್ಟಡ ಕಾಂಗ್ರೆಸ್‌ಗೆ ಸೇರಿದ್ದು – ಹೈ ಕೋರ್ಟ್ ತೀರ್ಪು

**● ಇದರಲ್ಲೂ ''ಕೈ'' ವಾಡವಿದೆಯೋ ?!**

★★★

ಗಣಿ ಅಕ್ರಮಕ್ಕೆ ಕಾಂಗ್ರೆಸ್ ಕುಮ್ಮಕ್ಕು – ಪತ್ರಿಕೆ

**● ಇದನ್ನು ಆಳವಾಗಿ ಶೋಧಿಸಬೇಕು !!**

★★★

ಅಕ್ರಮ ಸಕ್ರಮಕ್ಕೆ ಸುಗ್ರೀವಾಜ್ಞೆಗೆ ತೀರ್ಮಾನ – ಪತ್ರಿಕೆ

**● ಸರ್ಕಾರದ ನಿಲುವು 'ವಾಲಿ'ದಂತಿದೆ !!**

★★★

ದೇವ–ಕಣ ವಿಜ್ಞಾನಿಗಳಿಗೆ ನೊಬೆಲ್ ಪ್ರಶಸ್ತಿ – ಸುದ್ದಿ

**● ಅವರು ಪ್ರಶಸ್ತಿಯನ್ನು 'ಈಶ್ವರ ಪ್ರಸಾದ' ಎಂದು ಸ್ವೀಕರಿಸುತ್ತಾರಂತೆ !!**

★★★

ಗಡಿ ರಕ್ಷಣೆಯಲ್ಲಿ ವಾಯು ಸೇನೆಯೂ ಮುಖ್ಯ – ರಾಜ್ಯಪಾಲರು

**● ಆಂಜನೇಯ ನಸುನಕ್ಕನಂತೆ !!**

★★★

**foot in mouth** ಖಾಯಿಲೆ ದೆಹಲಿಯಲ್ಲೂ ಕಾಣಿಸಿಕೊಳ್ಳುತ್ತಿದೆ ಎಂದು ಅಪರಂಜಿ ನಕ್ಕಳಂತೆ !!

★★★

ಗೌಡರ ಟೀಕೆಗೆ ಪ್ರತಿಕ್ರಯಿಸಲು ಸಿ.ಎಂ. ನಕಾರ – ಪತ್ರಿಕೆ

**● ಮೌನೇನ ಕಲಹಂ ನಾಸ್ತಿ !!**

★★★

ಭರ್ತಿಯಾಗದ ಎರಡು ಮೆಡಿಕಲ್ ಸೀಟುಗಳು – ಸುದ್ದಿ

**● ಇಬ್ಬರಾದರೂ ಬಚಾವಾದರಲ್ಲ !!**

★★★

ರಾಹುಲ್ ಮುಂದಿನ ದಾರಿ ಯಾವುದು?

**● ಈ ಪ್ರಶ್ನೆ ರಾಹುಲ್ ಅವರನ್ನು ಕಾಡುತ್ತಿಲ್ಲ !!**

★★★

ಅಮೆರಿಕೆಯಲ್ಲಿ ಆರ್ಥಿಕ ಬಿಕ್ಕಟ್ಟು – ಸುದ್ದಿ

**● ಹಿರಿಯಕ್ಕನ ಚಾಳಿ........ !!**

★★★

---★★★---★★★---★★★---★★★---★★★---★★★---★★★---

**ಕನ್ನಡದ ಮೊದಲ ಮಹಾಕಾವ್ಯ - ಆದಿಪುರಾಣ**







# ತದ್ರೂಪಿ ಪ್ರಸಂಗ

**- ವತ್ಸನ**

**ನಾ**ನು ಆಗಾಗ್ಗೆ ಯೋಚನೆ ಮಾಡ್ತಾನೇ ಇರ್ತೀನಿ, ನನಗೆ ಅತ್ಯಂತ ಗಾಬರಿ ಉಂಟುಮಾಡಿ ತತ್ತರಿಸೋ ಹಾಗೆ ಮಾಡೋ ಸನ್ನಿವೇಶ ಹೇಗಿರಬಹುದೂ ಅಂತ. ಇದೊಂದು ಸ್ಯಾಡಿಸ್ಟಿಕ್ ಹಾಬಿ ಅನ್ನಬಹುದು ನೀವು. ನೀವು ಏನೇ ಹೇಳಿ ನನಗಂತೂ ಇದೊಂದು ಬಿಡಲಾರದ ಚಟವಾಗಿಬಿಟ್ಟಿದೆ. ಉದಾಹರಣೆಗೆ ಒಂದು ಚಳಿಗಾಲದ ಬೆಳಗ್ಗೆ ನೀವು ಆರು ಗಂಟೆಗೆ ಏಳ್ತೀರಾ ಅಂತ ಇಟ್ಕೊಳ್ಳಿ. ಹೊರಗೆ ಕತ್ತಲೆಯೋ ಕತ್ತಲೆ. ಪವರ್ ಹೋಗಿರೋದರಿಂದ ಟಾರ್ಚ್ ಲೈಟ್‌ನಲ್ಲೇ ಬಾತ್‌ರೂಮಿಗೆ ಹೋಗಿ ಬಂದು ಇನ್ನೂ ಬೆಳಗಾಗದೇ ಇರೋದ್ರಿಂದ ಪುನಃ ಹೊದ್ದು ಮಲಗ್ತೀರ. ಎಚ್ಚರವಾದಾಗ ಇನ್ನೂ ಕತ್ತಲೆ. ಗಾಢ ಕತ್ತಲೆ. ಟಾರ್ಚ್ ಲೈಟಲ್ಲಿ ವಾಚ್ ನೋಡಿದರೆ ಎಂಟು ಗಂಟೆ. ಹಾಸಿಗೆಯಿಂದ ಎದ್ದು ಮನೆ ಹೊರಗೆ ಬಂದರೆ ನಿಮ್ಮ ನೆರೆಹೊರೆಯವರೆಲ್ಲಾ ಬೀದಿಗೆ ಬಂದು ಗಾಬರಿಯಿಂದ ಮಾತೇ

---


## ಧನ್ಯವಾದಗಳು

ಕನ್ನಡದ ಹಿರಿಯ ಲೇಖಕರೂ, ಅಪರಂಜಿಯ ಚಂದಾದಾರರೂ, ಅಭಿಮಾನಿಗಳೂ ಆದ ಶ್ರೀ ನ. ರತ್ನ (ಮೈಸೂರು) ಅವರು ಅಪರಂಜಿಯ ಆರ್ಥಿಕ ಸುಭದ್ರತೆಗೆ ತಮ್ಮ ಕಿರುಕಾಣಿಕೆಯಾಗಿ **2500/-** ರೂಪಾಯಿಗಳನ್ನು ಕಳಿಸಿಕೊಟ್ಟಿದ್ದಾರೆ. ಅವರಿಗೆ ಅಪರಂಜಿಯ ಎಲ್ಲ ಓದುಗರ ಪರವಾಗಿ, ಕೊರವಂಜಿ ಅಪರಂಜಿ ಟ್ರಸ್ಟ್ ಪರವಾಗಿ ಧನ್ಯವಾದಗಳು. ಶ್ರೀ ನ. ರತ್ನ ಅವರಂತಹ ಇನ್ನೂ ಅನೇಕ ಅಭಿಮಾನಿಗಳ ಸಹಕಾರವಿದ್ದಲ್ಲಿ ಅಪರಂಜಿಯು ಇನ್ನೂ ಅನೇಕ ವರ್ಷಗಳ ಕಾಲ ಮೈ ಕೈ ತುಂಬಿಕೊಂಡು ಜನಮಾನಸದಲ್ಲಿ ಓಡಾಡಿಕೊಂಡಿರುತ್ತಾಳೆ.

ಕೊರವಂಜಿಯ ಕಳೆದ ತಲೆಮಾರಿನ ಹಿರಿಯ ಲೇಖಕರು ಶ್ರೀ ಬೀರಣ್ಣ (ಶ್ರೀ ಬಿ.ಆರ್. ನಾರಾಯಣ ಅಯ್ಯಂಗಾರ್) ಅವರ ಮಗಳಾದ ಶ್ರೀಮತಿ ಬಿ.ಎನ್. ಶುಭ ಅವರು ಅಪರಂಜಿಯ ನಿರಂತರ ಓದುಗರು. ಇಂದಿನ ದಿನಗಳಲ್ಲಿನ ನಿರಂತರ ಬೆಲೆ ಏರಿಕೆ, ವಾಹನ ದಟ್ಟಣೆ, ಮಾಲಿನ್ಯ ಇವುಗಳ ನಡುವೆಯೂ ತಿಂಗಳಿಗೊಮ್ಮೆ ಅಪರಂಜಿಯ ಮೂಲಕ ನಮ್ಮ ಮುಖದಲ್ಲಿ ಅಷ್ಟಿಷ್ಟಾದರೂ ಕಿರುನಗೆ ಮೂಡುತ್ತಿದೆ. ಈ ಪ್ರಕ್ರಿಯೆ ನಿರಂತರವಾಗಿ ಮುಂದುವರಿಯಲಿ ಹಾಗೂ ಇದಕ್ಕೆ ಕಾರಣರಾಗಿರುವ ಎಲ್ಲರನ್ನೂ ಹೃದಯತುಂಬಿ ಅಭಿನಂದಿಸುತ್ತಾ ಅಪರಂಜಿಯ ಆರ್ಥಿಕ ಸುಭದ್ರತೆಗಾಗಿ **5000/-** ರೂಪಾಯಿಗಳನ್ನು ಕಳಿಸಿಕೊಟ್ಟಿದ್ದಾರೆ. ಅಪರಂಜಿ ಇವರ ಔದಾರ್ಯಕ್ಕೆ ನಡುಬಾಗಿ ನಮಿಸಿ ಇಂತಹ ಔದಾರ್ಯವೇ ಅಪರಂಜಿ ನಗೆಹೊತ್ತು ತಿರುಗುವಂತೆ ಮಾಡಿರುವುದು ಎಂದು ಅಪರಂಜಿ ಬಳಗ ತನ್ನ ಕೃತಜ್ಞತೆಯನ್ನು ಅರ್ಪಿಸುತ್ತದೆ.

ಸಂಪಾದಕರು

ಹೊರಡದೆ ನಿಂತಿರ್ತಾರೆ. ಸೂರ್ಯ, ಕೋಟ್ಯಾಂತರ ವರ್ಷಗಳಿಂದ ಕರಾರುವಾಕ್ಕಾಗಿ ಬೆಳಗ್ಗೆ ಹುಟ್ಟುತ್ತಿದ್ದ ಸೂರ್ಯ ಅದು ಯಾಕೋ ಈ ಬೆಳಗ್ಗೆ ಹುಟ್ಟೇ ಇಲ್ಲ. ಟಿ.ವಿ. ನ್ಯೂಸ್ ನೋಡೋಣ ಅಂದ್ರೆ ಪವರ್ ಇಲ್ಲ. ಮೊಬೈಲ್‌ನಲ್ಲಿ ಫೋನ್ ಮಾಡಿ ಬಂಧುಮಿತ್ರರಿಂದ ಸಪೋರ್ಟ್ ಪಡೆಯೋಣ ಅಂದ್ರೆ ನೆಟ್‌ವರ್ಕ್ ಡೌನ್. ಬೀದಿಯಲ್ಲಿ ನಿಂತಿರುವ ಪಕ್ಕದ ಮನೆಯವರ ಹತ್ತಿರ ಮಾತನಾಡೋಣ ಅಂದರೆ ಯಾರಿಗೂ ಭಯದಿಂದ ಮಾತೇ ಹೊರಡ್ತಾ ಇಲ್ಲ. ಇದೊಂದು ವಿಚಿತ್ರ ಸೂರ್ಯಗ್ರಹಣ. ಗಂಟೆಗಟ್ಟಲೆ ನಿರಂತರ ಸೂರ್ಯಗ್ರಹಣ. ಇದು ನನಗೆ ಆಗಾಗ್ಗೆ ಮನಸ್ಸಿಗೆ ಬರೋ ಸನ್ನಿವೇಶ. ಇದೊಂದೇ ಅಲ್ಲ ಅನ್ನಿ ನನಗೆ ಹೊಳೆಯೋದು. ನನ್ನ ಕಲ್ಪನಾ ಶಕ್ತಿ ಭೋರ್ಗರೆಯುವ ನದಿ ಅಂತ ಯಾವಾಗಲೂ ಶರಲೇಖ ತಮಾಷೆ ಮಾಡ್ತಾನೇ ಇರ್ತಾನೆ. ಇದು ಹಾಗಿರಲಿ, ಆ ಬೆಳಗ್ಗೆ ಸೂರ್ಯ ಚೆನ್ನಾಗಿ ಹುಟ್ಟಿ ಝಗಝಗಿಸ್ತಾನೇ ಇದ್ದ ನಾನು ನನ್ನ ಬಾತ್‌ರೂಮಿನಲ್ಲಿ ಸ್ನಾನ ಮುಗಿಸಿ ಡ್ರಾಯಿಂಗ್ ರೂಮಿಗೆ ಬಂದಾಗ. ಶರಲೇಖ ಇನ್ನೂ ತನ್ನ ಸ್ನಾನದ ಮನೆಯಲ್ಲೇ ಇದ್ದ. ನಾನು ಬೆಳಗಿನ ಪೇಪರ್ ಓದುಕ್ಕೇ ಅಂತ ಡ್ರಾಯಿಂಗ್ ರೂಮಿಗೆ ಬಂದೆ ನೋಡಿ. ನನ್ನ ಜೀವಮಾನದಲ್ಲಿ ಎಂದಿಗೂ ಅನುಭವಿಸದಂತಹ ಗಾಬರಿ ಸನ್ನಿವೇಶ ನನಗೆ ಕಾದಿತ್ತು.

ಡ್ರಾಯಿಂಗ್ ರೂಮಿನಲ್ಲಿ ನಾನು ದಿನಾಗಲೂ ಕುಳಿತುಕೊಳ್ಳುವ ಸೋಫಾದಲ್ಲಿ ಆಸಾಮಿಯೊಬ್ಬ ಕುಳಿತು ಪೇಪರ್ ಓದುತ್ತಿದ್ದ. ಅದರಲ್ಲೇನು ಗಾಬರಿಯ ವಿಷಯ ಎಂದು ಕೇಳಬಹುದು ನೀವು. ಕುಳಿತಿದ್ದಾತ ನಾನು ಧರಿಸಿದ್ದ ಬಟ್ಟೆಗಳನ್ನೇ ಧರಿಸಿದ್ದರ ಜೊತೆಗೆ ನೋಡಲು ಥೇಟ್ ನನ್ನಂತೆಯೇ ಕಾಣುತ್ತಿದ್ದ. ನನ್ನ ತದ್ರೂಪಿ ಅನ್ನುವ ಹಾಗಿದ್ದ.

''ಯಾರು ನೀವು?'' ನಡುಗುತ್ತಿರುವ ದನಿಯಲ್ಲಿ ಕೇಳಿದೆ.

''ನಾನು ಅದೇ ಪ್ರಶ್ನೆಯನ್ನ ನಿಮಗೆ ಕೇಳಬೇಕಾಗುತ್ತೆ. ನಾನು ವತ್ಸನ. ನನ್ನಂತೆಯೇ ಕಾಣುತ್ತಿರುವ ನೀವು ಯಾರು? ನನ್ನ ಫ್ಲಾಟಿನಲ್ಲಿ ನಿಮಗೇನು ಕೆಲಸ?'' ಅಂತ ಆಸಾಮಿ ನನಗೇ ಸವಾಲು ಹಾಕಿದ. ನನಗೆ ಕಾಲುಗಳು ಸೋತುಬಂದಂತಾಯಿತು. ಹತ್ತಿರದ ಸೋಫಾದ ಮೇಲೆ ಕುಸಿದೆ.

ಆತ ನನ್ನನ್ನೇ ದಿಟ್ಟಿಸಿ ನೋಡಲು ಶುರು ಮಾಡಿದ. ಎಷ್ಟು ಕ್ಷಣಗಳು ಸರಿದವೋ ನನಗೆ ತಿಳಿಯದು. ಶರಲೇಖ ತನ್ನ ರೂಮಿನಿಂದ ಸ್ನಾನ ಮುಗಿಸಿ ಹೊರಬಂದ. ಅವನಿಗೆ ಏನನ್ನಾದರೂ ಹೇಳಬೇಕೆಂದರೆ ಮಾತು ಹೊರಟರೆ ತಾನೆ. ಶರಲೇಖ ನಮ್ಮಿಬ್ಬರನ್ನೂ ಬಹು ಸೂಕ್ಷ್ಮವಾಗಿ ಪರಿಶೀಲಿದ.

ಅನಂತರ ಅನಾಮತ್ತಾಗಿ ಬವಳಿ ಬಂದವರಂತೆ ನೆಲಕ್ಕುರುಳಿದ. ನಾನು ಬೇಗನೆ ಅವನ ಬಳಿ ಓಡಿ ಮೇಜಿನ ಮೇಲಿದ್ದ ನೀರಿನ ಹೂಜಿಯಿಂದ ಅವನ ಮುಖದ ಮೇಲೆ ನೀರು

-★★★--★★★--★★★--★★★--★★★--★★★--★★★--★★★--★★★--★★★-

**ಕನ್ನಡದ ಆದಿ ಕವಿ - ಪಂಪ**

ಚುಮುಕಿಸಿದೆ. ಅವನಿಗೆ ಪ್ರಜ್ಞೆ ತಪ್ಪಿರಲಿಲ್ಲ. ನನ್ನನ್ನು ನೋಡಿದೊಡನೆ ಎದ್ದು ಸೋಫಾದ ಮೇಲೆ ಕುಳಿತು ನನ್ನನ್ನು ಪಕ್ಕದಲ್ಲಿ ಕೂರಿಸಿಕೊಂಡ. ಅನಂತರ ಬಂದ ವ್ಯಕ್ತಿಯನ್ನು ಕುರಿತು.'' ಅಸಲಿ ವತ್ಸನ ಯಾರು ಎಂದು ತಿಳಿಯಿತು. ಯಾರು ನೀನು? ಯಾಕೆ ಇವನ ವೇಷ ಧರಿಸಿ ಇಲ್ಲಿ ಬಂದಿರುವೆ'' ಅಂತ ಸ್ಪಷ್ಟವಾಗಿ ದೃಢವಾದ ದನಿಯಲ್ಲಿ ಕೇಳಿದ. ಅವನ ದೃಢತೆ ಕಂಡು ನನಗೂ ಸ್ವಲ್ಪ ಧೈರ್ಯ ಬಂತು. ಬಂದಿದ್ದ ವ್ಯಕ್ತಿ ಸ್ವಲ್ಪವೂ ವಿಚಲಿತಗೊಳ್ಳಲಿಲ್ಲ. ಶರಲೇಖನನ್ನು ಕುರಿತು ''ಭಲೆ ಭಲೆ ನೀವು ಅಸಲಿ ವ್ಯಕ್ತಿಯನ್ನು ಗುರುತಿಸಿದ ಕ್ರಮ ನಿಜಕ್ಕೂ ಒಂದು ಅಪೂರ್ವ ವಿಧಾನ. ವಿಜ್ಞಾನಕ್ಕೆ ಇದೊಂದು ಹೊಸ ಕೊಡುಗೆ'' ಅಂದ ಆತ.

ಅವನು ನಾನಲ್ಲ ಅಂತ ಒಪ್ಪಿ ಕೊಂಡದ್ದು ಕೇಳಿ ನನ್ನ ಮಾನಸಿಕ ಆರೋಗ್ಯದ ಬಗ್ಗೆ ನನ್ನ ಮನಸ್ಸಿನಲ್ಲಿ ಒತ್ತಿಬರುತ್ತಿದ್ದ ಕಳವಳ ಸ್ವಲ್ಪ ಕಡಿಮೆಯಾಗಿ ಹಾಯೆನಿಸಿತು. ಸದ್ಯ ಇವನು ತೊಲಗಿದರೆ ಸಾಕಪ್ಪಾ ಅಂದುಕೊಳ್ಳುತ್ತಿದ್ದೆ. ಶರಲೇಖ ತೀವ್ರವಾಗಿ ಯೋಚಿಸುತ್ತಿದ್ದಂತೆ ಕಂಡಿತು. ಕೊನೆಗೆ ಅವನು ಬಂದ ವ್ಯಕ್ತಿಯನ್ನು ಕುರಿತು ''ಇ.ಪಿ.ಆರ್. ಪ್ರಯೋಗವನ್ನು ಬಳಸಿ ಕ್ವಾಂಟಮ್ ಸ್ಕಾನಿಂಗ್ ಮಾಡಿ ಕ್ಲೋನಿಂಗ್ ಮಾಡಿರುವಿರೇನು?'' ಅಂತ ನೇರವಾಗಿ ಪ್ರಶ್ನಿಸಿದ.

ಬಂದ ವ್ಯಕ್ತಿ ಶರಲೇಖನಿಗೆ ಉತ್ತರಿಸಲು ಯಾವುದೇ ತರಾತುರಿಯಲ್ಲಿದ್ದಂತೆ ತೋರಲಿಲ್ಲ. ಅವನ ಮುಖಚರ್ಯೆಯನ್ನು ನೋಡಿದರೆ ಆತ ಇದನ್ನೆಲ್ಲಾ ತುಂಬಾ ಸಂತಸದಿಂದ ಅನುಭವಿಸುತ್ತಿರುವಂತೆ ತೋರಿತು. ಅವನು ಶರಲೇಖನನ್ನು ಕುರಿತು, ''ನಾನು ಅಸಲಿ ವತ್ಸನ ಅಲ್ಲ. ಅವನ ಹೊರರೂಪವನ್ನು ಧರಿಸಿರುವ ಒಬ್ಬ ಜೀವಿ ಅಂತ ಹೇಳಿ ವತ್ಸನರಿಗೆ ಆಗಿರಬಹುದಾದ ಕಳವಳವನ್ನು ಹೋಗಲಾಡಿಸಬಯಸುವೆ. ಅವರು ಸ್ನಾನವಾದನಂತರ ಪೇಪರ್ ಓದುತ್ತಾ ಕಾಫಿ ಕುಡಿಯುವುದು ಒಂದು ದಿನವಹಿ ನಡೆಯುವ ಕ್ರಿಯೆ. ಪೇಪರ್ ಏನೋ ಸಿಕ್ಕಿತು. ಸ್ವಲ್ಪ ಕಾಫಿ ಸಿಗುವಂತೆ ಮಾಡಿದರೆ ಕಾಫಿ ಕುಡಿಯುತ್ತಾ ನಿಮ್ಮ ಈ ವಿಚಿತ್ರ ಅನುಭವದ ಹಿನ್ನೆಲೆಯನ್ನು ವಿವರಿಸುವೆ. ಸರೋಜಮ್ಮನವರನ್ನು ಕರೆಯಬೇಡಿ. ಇಬ್ಬರು ವತ್ಸನರನ್ನು ನೋಡಿ ಮೂರ್ಛೆ ಹೋದಾರು'' ಅಂದ ಆ ಹೆಸರಿಲ್ಲದ ವ್ಯಕ್ತಿ.

ಶರಲೇಖ ನಸುನಕ್ಕು ತಾನೇ ಎದ್ದು ಕಾಫಿ ತರಲು ಒಳಗೆ ಹೋದ. ಇಂಥ ಪರಿಸ್ಥಿತಿಯಲ್ಲಿ ನಗು ಹೇಗಾದರೂ ಬರುತ್ತೆ ಅಂತ ನನಗೆ ಶರಲೇಖನ ಮೇಲೆ ರೇಗಿತು.

ಶರಲೇಖ ಕಾಫಿಯನ್ನು ತಂದ ಮೇಲೆ ಆಗಂತುಕ ಅದನ್ನು ಕುಡಿಯುತ್ತ ತನ್ನ ವಿವರಣೆ ಶುರು ಮಾಡಿದ.

''ನೀವುಗಳು ಕ್ಷೀರಪಥದ ನಿವಾಸಿಗಳು. ನೀವು ಆಂಡ್ರೋಮಿಡಾ ಎಂದು ಕರೆಯುವ ತಾರಾಪುಂಜದಿಂದ ಬಂದವನು ನಾನು. ಆ ತಾರಾಪುಂಜದಲ್ಲಿರುವ ಒಂದು ಸೂರ್ಯನ ಸುತ್ತ ತಿರುಗುತ್ತಿರುವ ಹಲವಾರು ಗ್ರಹಗಳಲ್ಲಿ ಒಂದು ಮನೋಹರ ಗ್ರಹ ನನ್ನ ವಾಸಸ್ಥಾನ. ನಿಮ್ಮ

-★★★--★★★--★★★--★★★--★★★--★★★--★★★--★★★--★★★--★★★-

**ಕನ್ನಡದ ಮೊದಲ ರಾಷ್ಟ್ರಕವಿ - ಎಂ. ಗೋವಿಂದ ಪೈ**

ಮಾನವ ಕುಲಕ್ಕೆ ಹೋಲಿಸಿದರೆ ನಮ್ಮ ವಿಜ್ಞಾನದ ಪ್ರಗತಿ ಸಾವಿರ ಪಾಲು. ದಶ ಲಕ್ಷ ವರುಷಗಳಷ್ಟು ಹಿಂದೆಯೇ ನಾವು ರಾಸಾಯನಿಕ ವಸ್ತುಗಳಿಂದ ನಿರ್ಮಿತವಾದ ದೇಹಗಳನ್ನು ತ್ಯಜಿಸಿ ಸ್ವತಂತ್ರ ಜೀವಿಗಳಾಗಿ ಓಡಾಡುವುದನ್ನು ಅಭ್ಯಾಸಮಾಡಿಕೊಂಡೆವು. ವ್ಯಾವಹಾರಿಕ ಅಗತ್ಯಕ್ಕೆ ನಮಗೆ ಬೇಕಾದ ರೋಬಟ್‌ಗಳನ್ನು ನಿರ್ಮಿಸಿ ಅದರಲ್ಲಿ ನೆಲಸುವ ಪರಿಪಾಠ ನಮ್ಮಲ್ಲಿ ಬೆಳೆದು ಬಂದಿದೆ. ನಮ್ಮ ನಾಡಿನಲ್ಲಿ ನಾನೊಬ್ಬ ವಿಜ್ಞಾನಿ. ಕ್ವಾಂಟಮ್ ಸ್ಕಾನರ್ ಮತ್ತು ಕ್ಲೋನರ್ ಅನ್ನು ಪರಿಷ್ಕರಿಸಿದ್ದು ನಮ್ಮ ಪ್ರಯೋಗಾಲಯದಲ್ಲಿಯೇ. ನಿಮ್ಮ ಮನಸ್ಸಿನಲ್ಲಿ ಹುಟ್ಟಿರಬಹುದಾದ ಹಲವು ಮೂಲಭೂತ ಪ್ರಶ್ನೆಗಳಿಗೆ ಮೊದಲು ಉತ್ತರ ನೀಡಿಬಿಡುವೆ. ಆಂಡ್ರೋಮಿಡಾದಿಂದ ನಾನು ಬೆಳಕಿನ ವೇಗದಲ್ಲಿ ಬಂದರೂ ಇಲ್ಲಿಗೆ ಬರಲು ಇಪ್ಪತ್ತೆರಡು ಲಕ್ಷ ವರ್ಷಗಳು ಬೇಕಾಗುತ್ತದೆ. ಆದರೆ ವರ್ಮ್ ಹೋಲ್ ಎಂಬ ಹತ್ತಿರದ ದಾರಿಯನ್ನು ದಕ್ಷತೆಯಿಂದ ಬಳಸಿದರೆ ಕ್ಷಣ ಮಾತ್ರದಲ್ಲಿ ಅಲ್ಲಿಂದ ಇಲ್ಲಿಗೆ ಬರಬಹುದು.

ಇನ್ನೊಂದು ವಿಷಯ. ನೀವು ದೇಹ ಎಂದು ಕರೆಯುವ ಈ ಯಂತ್ರದ ಪ್ರತಿಯೊಂದು ಕಣವನ್ನು ಸ್ಕಾನ್ ಮಾಡಿ ಪುನಃ ಅದೇ ರೂಪದಲ್ಲಿ ಪ್ರತಿಕೃತಿಯನ್ನು ರೂಪಿಸಬಲ್ಲ ಸ್ಕಾನರ್ ಕಮ್ ಕ್ಲೋನರ್ ನಮ್ಮ ಪ್ರಯೋಗಾಲಯದ ಅತ್ಯಾಧುನಿಕ ಅನ್ವೇಷಣೆ. ಮೊನ್ನೆ ನಮ್ಮ ಗ್ರಹದಲ್ಲಿ ಇದನ್ನು ನಿರ್ಮಿಸಿದ ನಂತರ ಅದರ ಪರೀಕ್ಷಾ ಪ್ರಯೋಗ ಮಾಡೋಣವೆಂದರೆ ಅಲ್ಲಿ ರಾಸಾಯನಿಕ ದೇಹಗಳು ನಾಶವಾಗಿ ಯುಗಗಳೇ ಕಳೆದಿದ್ದವು. ಇಡೀ ಜಗತ್ತನ್ನು ವರ್ಮ್ ಹೋಲ್ ಮೂಲಕ ಸುತ್ತಿ ಕೊನೆಗೆ ನಿಮ್ಮ ಈ ಭೂಗ್ರಹದಲ್ಲಿ ದೇಹಗಳಿರುವುದನ್ನು ಪತ್ತೆ ಹಚ್ಚಿದೆ. ತಕ್ಷಣ ಸ್ಕಾನರನ್ನು ಹಿಡಿದು ಇಲ್ಲಿಗೆ ಬಂದೆ. ಆಗ ನಾನಿನ್ನೂ ಹೊರ ರೂಪವಿಲ್ಲದ ಜೀವಿ ಅಷ್ಟೆ. ಇಲ್ಲಿ ನಿಮ್ಮ ಡ್ರಾಯಿಂಗ್ ರೂಮಿಗೆ ಬಂದ ತಕ್ಷಣ ವತ್ಸನ ಅವರು ನನ್ನ ಮುಂದೆ ಬಂದರು. ಅವರನ್ನು ಸ್ಕಾನ್ ಮಾಡಿ ಕೇವಲ ಏಳು ನ್ಯಾನೋ ಸೆಕೆಂಡುಗಳಲ್ಲಿ ಅವರ ಪ್ರತಿಕೃತಿ ನಿರ್ಮಿಸಿ ಇಲ್ಲಿ ನಾನು ಸೋಫಾದ ಮೇಲೆ ಕುಳಿತಿದ್ದೆ. ಅವರ ದೇಹವನ್ನು ಆಕ್ರಮಿಸಿದ ತಕ್ಷಣ ಅವರ ಮಿದಿಳಿನಲ್ಲಿ ಹಾದುಹೋಗುತ್ತಿದ್ದ ಎಲ್ಲ ಆಲೋಚನೆಗಳು, ಎಲ್ಲ ನೆನಪುಗಳು ನನಗೆ ತಿಳಿದವು. ನನ್ನನ್ನು ನೋಡಿ ಅವರು ಪಟ್ಟ ಗಾಬರಿ ನನಗೂ ತಟ್ಟಿತು. ಅಷ್ಟರಲ್ಲಿ ನೀವು ಶರಲೇಖ ಇಲ್ಲಿಗೆ ಬಂದಿರಿ. ಈ ದೇಹ ಕ್ವಾಂಟಮ್ ಪ್ರತಿಕೃತಿಯಾದುದರಿಂದ ಲವಲೇಶವೂ ವ್ಯತ್ಯಾಸವಿರದು. ನಮ್ಮಿಬ್ಬರಲ್ಲಿ ಅಸಲಿ ಯಾರು ಎಂದು ತಿಳಿಯಲು ನೀವು ಏನೇ ಪ್ರಶ್ನೆ ಕೇಳಿದ್ದರೂ ಅವರಿಗಿಂತ ಮೊದಲೇ ನಾನು ಅವರಂತೆಯೇ ಉತ್ತರಿಸುತ್ತಿದ್ದೆ. ಹೇಗಿದ್ದರೂ ಅವರ ಮಿದುಳನ್ನೇ ತಾನೆ ನಾನು ಬಳಸುತ್ತಿರುವುದು. ಆದರೆ ನೀವು ಬಹು ಬೇಗನೆ ಅಸಲಿ ವತ್ಸನರನ್ನು ಪತ್ತೆ ಹಚಿದಿರಿ. ಅದು ಹೇಗೆ ಹೇಳುವಿರಾ?''

ಶರಲೇಖ ಬಹು ಆಸಕ್ತಿಯಿಂದ ಆಗಂತುಕನ ವಿವರಣೆಯನ್ನು ಕೇಳಿಸಿಕೊಂಡಿದ್ದ. ಈಗ ಅವನ ಪ್ರಶ್ನೆಯನ್ನು ಹೇಗೆ ಉತ್ತರಿಸುತ್ತಾನೆ ಎಂಬ ಕುತೂಹಲ ನನಗೆ. ಶರಲೇಖ ಹೇಳಲು ಪ್ರಾರಂಭಿಸಿದ.

-★★★--★★★--★★★--★★★--★★★--★★★--★★★--★★★--★★★--★★★-

**ಇಂಗ್ಲಿಷಿಗೆ ಭಾಷಾಂತರಗೊಂಡ ಮೊದಲ ಕನ್ನಡ ಕಾದಂಬರಿ**
**- ಇಂದಿರಾ ಬಾಯಿ**

''ನಿಮ್ಮ ಇಬ್ಬರನ್ನು ನೋಡಿದ ತಕ್ಷಣ ಇದು ಸಾಮಾನ್ಯ ಮಾರುವೇಷವಲ್ಲ, ತೀರ ಮೂಲಭೂತವಾದ ಮಾರುವೇಷ ಎಂಬುದು ಖಚಿತವಾಯಿತು. ಅದು ಯಾವ ರೀತಿ ಆಯಿತು ಅನ್ನುವುದಕ್ಕಿಂತ ನನ್ನ ಗೆಳೆಯ ವತ್ಸನ ಮನಸ್ಸಿನಲ್ಲಿ ಆಗುತ್ತಿರುವ ಭಯ ಕಳವಳ ಇವುಗಳನ್ನು ಊಹಿಸಿ, ಮೊದಲಿಗೆ ಅಸಲಿ ವತ್ಸನನ್ನು ಗುರುತಿಸುವುದು ನನಗೆ ಅತಿ ಮುಖ್ಯವಾಯಿತು. ನಾನು ಬವಳಿ ಬಂದು ಬಿದ್ದಂತೆ ನಟಿಸಿದೆ. ವತ್ಸನ ಮತ್ತು ನನ್ನದು ಬಹು ಹಳೆಯ ಸ್ನೇಹ. ನಾನು ಬಿದ್ದದ್ದು ನೋಡಿ ಆತ ಏನೂ ಯೋಚಿಸದೇ ನನ್ನ ಬಳಿ ಓಡಿ ಬಂದ. ನೀವು ವಿಜ್ಞಾನಿಯಂತೆ ಎಲ್ಲವನ್ನೂ ಕುತೂಹಲದಿಂದ ನೋಡುತ್ತಿದ್ದಿರಿ. ಕ್ವಾಂಟಮ್ ಪ್ರತಿಕೃತಿ ದೇಹದ ಪ್ರತಿಯೊಂದು ಕಣದ ಪ್ರತಿಕೃತಿಯನ್ನು ಬಹು ದಕ್ಷತೆಯಿಂದ ಸೃಷ್ಟಿಸಬಲ್ಲುದು. ಆದರೆ ಮಮತೆ, ಸ್ನೇಹ, ಕರುಣೆ, ಸಹಾನುಭೂತಿ ಇವು ನಮ್ಮ ಮನುಕುಲ ಬೆಳೆಸಿಕೊಂಡಿರುವ ದೈವೀ ಸಂಪತ್ತು. ಇದನ್ನು ನಿಮ್ಮ ಯಾವ ಸ್ಕಾನರ್ ಸಹಾ ನಕಲು ಮಾಡಲಾಗದು ಅನ್ನಿಸುತ್ತೆ ನನಗೆ.''

ಆಗಂತುಕನ ಮುಖದಲ್ಲಿ ಮಂದಹಾಸ ಮಿಸುಗಿತು. ''ನಾನೊಬ್ಬ ವಿಜ್ಞಾನಿ, ಇಂದು ಒಂದು ಬಹು ದೊಡ್ಡ ಪಾಠ ನಿಮ್ಮಿಂದ ಕಲಿತೆ. ಇನ್ನು ನಾನು ಹೊರಡುವ ಸಮಯವಾಯಿತು. ಹೀಗೇ ಹೊರಟುಬಿಟ್ಟರೆ ನಿಮಗೆ ಈ ಎಕ್ಸ್ಟ್ರಾ ವತ್ಸನನ್ನು ವಿಲೇವಾರಿ ಮಾಡುವ ಸಮಸ್ಯೆ ಮೂಡುತ್ತದೆ. ಹಾಗಾಗಿ ಈ ಕಣಗಳನ್ನು ಬೇರೆ ಯಾವುದೇ ಒಂದು ವಸ್ತುವಾಗಿ ನನ್ನ ಸ್ಕಾನರ್ ಮೂಲಕ ಪರಿವರ್ತಿಸಬಹುದು. ಇಗೋ ಇಲ್ಲಿರುವ ಹೂದಾನಿ. ಇದಕ್ಕೆ ಇನ್ನೊಂದು ಹೂದಾನಿ ಸೇರಿದರೆ ಒಂದು ಜೊತೆ ಆಗುತ್ತೆ. ಈ ನಕಲಿ ವತ್ಸನ ಇನ್ನು ಮೇಲೆ ಹೂದಾನಿಯಾಗಿ ಇಲ್ಲಿದ್ದು ನನ್ನ ಭೇಟಿಯನ್ನು ನೆನಪಿಸುತ್ತಾನೆ'' ಎಂದ ಆಗಂತುಕ. ತಕ್ಷಣ ಅವನಿದ್ದ ಜಾಗದಲ್ಲಿ ಒಂದು ಹೂದಾನಿ ಕಂಡಿತು. ಶರಲೇಖ ಕೂಲಾಗಿ ಎದ್ದು ನಿಂತು ಆ ಹೊಸ ಹೂದಾನಿಯನ್ನು ತೆಗೆದು ಹಳೆಯದರ ಪಕ್ಕದಲ್ಲಿಟ್ಟ.

ಎಲ್ಲ ಬೊಗಳೆ ಎನ್ನುತ್ತೀರ ನೀವು. ಬೇಕಾದರೆ ಬನಶಂಕರಿಯಲ್ಲಿರುವ ನನ್ನ ಫ್ಲಾಟಿಗೆ ಬನ್ನಿ. ಆಗಂತುಕ ಬಂದಿದ್ದಕ್ಕೆ ಪ್ರೂಫ್ ಆಗಿ ನಿಂತಿರುವ ಈ ಹೂದಾನಿಯನ್ನು ಖಂಡಿತ ನಿಮಗೆ ತೋರಿಸುತ್ತೇನೆ. ಆಗಲಾದರೂ ನೀವು ನನ್ನನ್ನು ನಂಬಲೇಬೇಕಾಗುತ್ತದೆ.

❋

---

## ಹಾಗಾಗಿಲ್ಲವಲ್ಲ!

ಅಜ್ಜಿ, ಏನು ಮಾಡ್ತಿದ್ದೀಯ?

ಕ್ರೀಂ ಹಚ್ತಾ ಇದೀನಿ ಮುಖಕ್ಕೆ. ಅದರಿಂದ ನಾನು ಸುಂದರವಾಗಿ ಕಾಣ್ತೀನಿ ಮರಿ.

ಮತ್ತೆ ಹಾಗೆ ಕಾಣ್ತಾನೆ ಇಲ್ಲ ನೀನು?

-★★★--★★★--★★★--★★★--★★★--★★★--★★★--★★★--★★★--★★★-

**ಕರ್ನಾಟಕದ ಶಾಸನಗಳ ಅಧ್ಯಯನಕ್ಕೆ ಅಸ್ತಿಭಾರ ಹಾಕಿದವರು**
**- ಡಾ|| ಫ್ಲೀಟ್ ಮತ್ತು ಬಿ.ಎಲ್. ರೈಸ್**



# ಮಾಸದ ಕನ್ನಡ

**- ಅ.ರಾ. ಮಿತ್ರ**

**ಗೆ**ಳೆಯ ಖಂಡಪ್ಪನ ಮನೆಗೆ ಹೋಗಿದ್ದೆ. ಅವನು ಮೊಮ್ಮಗಳಿಗೆ ಕನ್ನಡ ಪಾಠ ಹೇಳಿಕೊಡುತ್ತಿದ್ದ. ಅದಕ್ಕೇ ಒಳಗೆ ಹೋಗದೆ ಹೊರ ವರಾಂಡದಲ್ಲೇ ಕುಳಿತು ಕನ್ನಡ ಪಾಠ ಕೇಳಿದೆ. ಕನ್ನಡ ಪದ್ಯ ಅದು.

*ಕನ್ನಡದ ನೆಲದ ಪುಲ್ಲೆನಗೆ ಪರಮ ಪಾವನ ತುಲಸಿ*
*ಕನ್ನಡ ನೆಲದ ನೀರ್ವೊನಲೆನೆಗೆ ದೇವನದಿ....*

**ದಿನೇ ದಿನೇ ಕನ್ನಡದ ತೂಕ, ಮಾನ, ಹಿರಿಮೆ, ಚೈತನ್ಯ ಉಡುಗಿ ಹೋಗ್ತಾ ಇಲ್ಲವೆ?**

ಪುಲ್ ಎಂದರೆ ಏನಜ್ಜ?

ಪುಲ್ ಅಂದರೆ 'ಹುಲ್ಲು' ಕಣಮ್ಮ

ಹುಲ್ಲು ಅಂದರೆ?

ಹುಲ್ಲು ಅಂದರೆ ತೃಣ, ಘಾಸ

ಅಂದರೆ?

ಅಂದರೆ ಗ್ರಾಸು grass...

ಓ! ಗೊತ್ತಾಯ್ತು. ಪರಮ ಪಾವನ ಅಂದರೆ..?

ತುಂಬ ಪವಿತ್ರವಾದ ಅಂತ ಅರ್ಥ

ಅಂದರೆ

Holy ಅಂತಾರಲ್ಲ ಅದು

ನೀವ್ ರೋನೋ ಏನೋ ಇದೆಯಲ್ಲ ಅದೇನು ಅಜ್ಜ?

ಅದು ನೀರ್ ವೊನಲ್ ನೀರ್ವೊನಲ್ ಅಂತ ಕೂಡಿಸಿ ಹೇಳಮ್ಮ

ನೀರ್ ಅಂದರೆ ಗೊತ್ತು ವಾಟರ್ರೂ. ವೊನಲ್ ಅಂದ್ರೆ?

ನೀರ್‌ವೊನಲ್ ಅಂದ್ರೆ ನದಿ. ಅಂದ್ರೆ ರಿವರ್ರು ಗೊತ್ತಾಯ್ತೆ?

ಈ ತರಹದ ಪಾಠ ಅರ್ಧಗಂಟೆ ಸಾಗಿತ್ತು. ಇವನೇನು ಕನ್ನಡ ಕಲಿಸ್ತಾ ಇದಾನೊ? ಇಂಗ್ಲಿಷ್ ಕಲಿಸ್ತಾ ಇದಾನೊ? ಅಂತ ಅನುಮಾನ ನನಗೆ.

-★★★--★★★--★★★--★★★--★★★--★★★--★★★--★★★--★★★--★★★-

**ಕನ್ನಡ ನಾಡಿನ ಮೊದಲ ರಾಜವಂಶಜರು - ಕದಂಬರು**

ಅಷ್ಟರಲ್ಲಿ ಟೀ ಬಂತು. ಟೀ ಕುಡಿಯುವ ಹೊತ್ತಿಗೆ ಅವನ ಪಾಠ ಮುಗಿದಿತ್ತು.

ಹುಡುಗಿ ನನ್ನನ್ನು ನೋಡಿ 'ಹಾಯ್' ಎಂದು ವಿಶ್ ಮಾಡಿ ಡ್ರೆಸ್ ಮಾಡಿಕೊಂಡು ಟಿಫಿನ್ ಕ್ಯಾರಿಯರ್ ತಗೊಂಡು ಬಸ್‌ಗೆ ವೈಟ್ ಮಾಡಬೇಕು ಅಂಕಲ್ ಎಂದು ಟಾ ಟಾ ಎಂದು ಹೇಳಿ ಒಳಗೋಡಿತು. ಖಂಡಪ್ಪ ನನ್ನ ಒಳಗೆ ಕರೆದ.

ಏನೋ ಇದು ಮಗೂಗೆ ಕನ್ನಡ ಹೇಳಿಕೊಡ್ತಾ ಇದೀಯೊ ಅಥವಾ ಇಂಗ್ಲಿಷ್..

ಕನ್ನಡಾನೇ. ಪಾಪ ಅದು ಕನ್ನಡದ ಮಗು ಅಲ್ಲವಾ? ಅಚ್ಚ ಕನ್ನಡದ ಮಗು. ಕನ್ನಡ ಮಾತು ಸುಮಾರಾಗಿ ಅರ್ಥ ಆಗುತ್ತೆ. ಸ್ವಲ್ಪ ಇಂಗ್ಲಿಷಿನಲ್ಲಿ ಹೇಳಿ ಬಿಟ್ಟರಂತೂ ಕನ್ನಡ ಬೇಗ ಅರ್ಥವಾಗುತ್ತೆ.

ಅಂದರೆ?

ಚೆನ್ನಾಗಿ ಅರ್ಥವಾಗಿದ್ರೆ ಹೌ ಸ್ವೀಟ್! ಅನ್ನತ್ತೆ. ಪದ್ಯ ಓದಿದರೆ ತಲೆದೂಗುತ್ತೆ. ಅರ್ಥ ಆಯಿತಾ ಅಂದರೆ ಉಹುಂ ಎನ್ನುತ್ತಾ ತಲೆದೂಗುತ್ತೆ. ನವೆಂಬರ್‌ನಲ್ಲಿ ಸ್ಕೂಲ್‌ನಲ್ಲಿ ಕನ್ನಡ ರಾಜ್ಯೋತ್ಸವ ಇದೆಯಂತೆ. ಅದಕ್ಕೆ ಒಂದು ಪದ್ಯ ಕೋರಸ್‌ನಲ್ಲಿ ಹೇಳಲು ಇವಳನ್ನು ಆರಿಸಿದ್ದಾರಂತೆ. ಪದ್ಯ ಕಷ್ಟ ಅಲ್ವಾ? ಪಾಪ ಅದನ್ನೇ ಕಲೀತಾ ಇದ್ಳು. ಮಿಸ್ಸು ಅವಳಿಗೆ ನಿನ್ನ ವಾಯ್ಸು ಬ್ರಿಲಿಯಂಟಾಗಿದೆ ಅಂತ ಹೇಳಿ 'ಜೈ ಭಾರತ ಜನನಿಯ ತನುಜಾತೆ..' ಗುಂಪಿನಲ್ಲಿ ಹಾಡೋಕ್ಕೆ ಇವಳನ್ನೇ ಹಾಡಿನ ಲೀಡರ್ ಆಗಿ ನೇಮಿಸಿದ್ದಾರೆ. ಅದಕ್ಕೆ ಮೊನ್ನೆ ಎಲ್ಲಾ ಆ ಹಾಡು ಹೇಳಿಕೊಟ್ಟೆ. 'ತನುಜಾತೆ' ಶಬ್ದಕ್ಕೆ ಮಗಳು ಅಂತ ಹೇಳಿದಾಗ ಅವಳಿಗೆ ಅರ್ಥ ಆಯಿತು ಸದ್ಯ. ಜನನಿ ಅಂದರೆ ತಾಯಿ ಮದರ್ ಅನ್ನೋದೂ ಗೊತ್ತಾಯ್ತು. ಮುಂದಕ್ಕೆ ನೋಡಪ್ಪ ಎಲ್ಲಾ ಶಬ್ದಗಳಿಗೂ ಇಂಗ್ಲಿಷ್‌ನಲ್ಲಿ ಅರ್ಥ ಹೇಳಿದರೆ ಮಾತ್ರ ಅವಳಿಗೆ ಗೊತ್ತಾಗುತ್ತೆ. 'ಬೀಡೆ' ಹೊನ್ನಿನ ಗಣಿ, ಆರಾಮ ಇವಕ್ಕೆಲ್ಲ ಶುದ್ಧ ಇಂಗ್ಲಿಷ್ ಶಬ್ದಗಳನ್ನು ಹೊಂದಿಸಿಕೊಟ್ಟರೆ ಅರ್ಥಮಾಡಿಕೊಂಡ್ಳು ಕಣಯ್ಯ. ಕವಿಕೋಗಿಲೆ ಅಂದ್ರ ಏನು ಅನ್ನೋದು ಅವಳ ಮಿಸ್ಸಿಗೇ ಗೊತ್ತಾಗಿರಲಿಲ್ವಂತೆ.

ನಾನು ಖಂಡಪ್ಪನನ್ನು ಕೇಳಿದೆ: ಅಲ್ಲಯ್ಯ, ಕನ್ನಡ ರಾಜ್ಯೋತ್ಸವದ ಬಗ್ಗೆ ನಿನಗೆ ಏನನ್ನಿಸುತ್ತೆ?

ನನಗಾ? ನನ್ನ ಅಭಿಪ್ರಾಯ ತಗೊಂಡು ಏನ್ಮಾಡ್ತೀಯ?

ಹೇಳು ಪರವಾಗಿಲ್ಲ.

ದಿನೇ ದಿನೇ ಕನ್ನಡದ ತೂಕ, ಮಾನ, ಹಿರಿಮೆ, ಚೈತನ್ಯ ಉಡುಗಿ ಹೋಗ್ತಾ ಇಲ್ಲವೆ? ಆದ್ದರಿಂದ ನವೆಂಬರ್ 1ರಂದಾದರೂ ಆ ಭಾಷಾದೇವೀನ ನೆನಸ್ಕೊಂಡ್ರೆ ಒಳ್ಳೇದಲ್ವೆ? ಉಳಿದ 11 ತಿಂಗಳು ಆ ದೇವೀನ ಒಣಗಿಸ್ತೀವಲ್ಲ, ಆದ್ದರಿಂದ ನವೆಂಬರ್‌ನಲ್ಲಿ

-★★★--★★★--★★★--★★★--★★★--★★★--★★★--★★★--★★★--★★★-

**ಪ್ರಪ್ರಥಮ ಕನ್ನಡ ಸಾಹಿತ್ಯ ಸಮ್ಮೇಳನ ನಡೆದಿದ್ದು - ಬೆಂಗಳೂರಿನಲ್ಲಿ 1915ರಲ್ಲಿ**

‘ನೆನಸಿ’ಕೊಂಡರೆ ಅದೇ ಉತ್ತಮ ಅಲ್ಲವೆ? ‘ಒಂದು ದಳ ಶ್ರೀ ತುಳಸಿ, ಒಂದು ಗಂಗೋದಕ’ ಅಂತ ದಾಸರು ಹೇಳಿಲ್ಲವೆ? ಪಾಪ ಜಿ.ಪಿ. ರಾಜರತ್ನಂರ ಎಂಡ್ಕುಡ್ಕ ರತ್ನ ಏನು ಹೇಳಿದ:

ಕನ್ನಡದ ತಂಟೆಗೇನಾದ್ರೂ ಬಂದ್ರೆ

ಮಾನ ಉಳಿಸಾಕಿಲ್ಲ

ನವೆಂಬರ್ ಒಂದನೇ ದಿನ ಮಾತ್ರ ಅದರ ತಂಟೇಗೆ ಹೋದ್ರೆ ಸರಿ. ಉಳಿದಂತೆ ಕನ್ನಡದ ಸುದ್ದಿಗೆ ಹೋಗದೆ ಇಂಗ್ಲಿಷ್ ಭಾಷೆಗೆ ತ್ವಮೇವ ಶರಣಂ ಮಮ ಅನ್ನೋಣ. ಈಗಾಗ್ಲೆ ನೋಡು ಶಾಲೆಗಳಲ್ಲಿ ಇಂಗ್ಲಿಷ್ ಮೀಡಿಯಂ, ದೊಡ್ಡ ದೊಡ್ಡ ಮಾಲ್‌ಗಳಲ್ಲಿ, ದೊಡ್ಡ ದೊಡ್ಡ ಅಪಾರ್ಟ್‌ಮೆಂಟ್‌ಗಳಲ್ಲಿ ಹಿಂದಿ ಮೀಡಿಯಂ....

ಹಿಂದಿ ಮೀಡಿಯಂ?

ಹೌದು ಅಲ್ಲಿಯ ಮ್ಯಾನೇಜರ್‌ಗೆ, ಕಾವಲುಗಾರರಿಗೆ ಯಾರಿಗೂ ಕನ್ನಡ ಬರೋದೇ ಇಲ್ಲ, ಆದರೂ ನಾವು ಕನ್ನಡದವರು ಮ್ಯಾನೇಜ್ ಮಾಡ್ತಾ ಇಲ್ವೆ?

ನನಗೆ ಯಾಕೋ ಕನ್ನಡದ ಪ್ರಗತಿ ಚೆನ್ನಾಗಿಲ್ಲ ಅಂತ ಅನ್ನುತ್ತೆ. ಶಾಲೇಲಿ ಇಂಗ್ಲಿಷ್ ಕಾಟ, ದೂರದರ್ಶನದಲ್ಲಿ ಹತ್ತಾರು ಭಾಷೆಗಳ ಕಾಟ, ಚಿತ್ರಮಂದಿರಗಳಲ್ಲಿ ಪರಭಾಷಾ ಚಿತ್ರಗಳ ಕಾಟ, ಮಾಲ್‌ಗಳಲ್ಲಿ, ಫ್ಲಾಟ್‌ಗಳಲ್ಲಿ, ಅಂಗಡಿಗಳಲ್ಲಿ ಕನ್ನಡ ಬಿಟ್ಟು ಉಳಿದೆಲ್ಲ ಭಾಷೆಗಳ ವಿಜೃಂಭಣೆ. ಸಂದರ್ಶನಗಳಲ್ಲಿ ಕನ್ನಡ ಪ್ರಸಿದ್ಧ ನಟನಟಿಯರೂ ತಮಗೆ ಕನ್ನಡಕ್ಕಿಂತ ಇಂಗ್ಲಿಷ್ ಚೆನ್ನಾಗಿ ಬರುತ್ತದೆ ಎಂದು ತೋರಿಸಿಕೊಳ್ಳುವ ತವಕ. ಕನ್ನಡ ದಿನಪತ್ರಿಕೆಗಳ ಜಾಹೀರಾತಿನಲ್ಲಿ ಶೇ. 96ರಷ್ಟು ಇಂಗ್ಲಿಷ್ ವಿಜೃಂಭಣೆ. ಇವೆಲ್ಲಾ ನೋಡ್ತಾ ಇದ್ದರೆ ಇನ್ನು ಕೆಲವೇ ವರ್ಷಗಳಲ್ಲಿ ಕನ್ನಡ ಮೂಲೆಗುಂಪಾಗುತ್ತದೇನೋ ಎಂಬ ಭಯ ಇದೆ. ಅದನ್ನು ಖಂಡಪ್ಪನಿಗೆ ಹೇಳಿದಾಗ ಅವನು ‘ದಡ್ಡ ಮೂಲೆಗುಂಪಾದರೆ ಸಂತೋಷಪಡಬಹುದು ಅದು ಮೂಲೆ ‘ಒಂಟಿ’ಯಾಗುತ್ತೆ. ಮೂಲೆಗುಂಪಾಗೋದಿಲ್ಲ’ ಎಂದು ಹೇಳಿದ.

ನಾನು ಸುಮಾರು 30 ವರ್ಷಗಳ ಹಿಂದೆ ಬರೆದ ಒಂದು ಪದ್ಯ ಇವತ್ತಿಗೂ ನಿಜವೋ ಏನೋ. ರಾಜರತ್ನಂ ನೆನಪಿನ ಪದ್ಯ ಅದು.

*ಕನ್ನಡ ಕನ್ನಡ ಅಂತ ಬಡ್ಕೊಂಡು ಬುಟ್ಟೆ*
*ಬದಕುನುದ್ದಕ್ಕೂ ಸುಮಾಕೇ*
*ಕನ್ನಡಾಂತಂದ್ರೆ ಕಾನ್ವೆಂಟಿನಲ್ಲಿ*
*ಮುರಿತಾರಲ್ಲೋ ಎಮಿಕೆ (ಎಮಿಕೆ: ಮೂಳೆ)*

ಅಂದ್ಹಾಗೇ ಮಾಸದ ಕನ್ನಡ ಅಂದ್ರೆ ಏನು ಗೊತ್ತೆ? ನೆನಪಿನಿಂದ ‘ಮಾಸದ’ ಕನ್ನಡ ಅಲ್ಲ, ನವೆಂಬರ್ ಮಾಸದ ಕನ್ನಡ ಸ್ವಾಮಿ!

---

**ಕೇವಲ 5 ವಾರಗಳಲ್ಲಿ ಕನ್ನಡ ಕಲಿತ ಮೊದಲ ಆಂಗ್ಲ ಅಧಿಕಾರಿ**
**- ಜಾನ್ ರೀಡ್**

# ಎಲ್ಲೆಲ್ಲೂ ನಗುವಿದೆ....

**- ಎಚ್.ಜಿ. ಸೋಮಶೇಖರ ರಾವ್**

'**ನ**ಗು' ಎನ್ನುವುದು ಸಾಂಕ್ರಾಮಿಕವಾದದ್ದು ಎಂಬ ಮಾತಿದೆ (Laughter is epidemic). ಅದು 'ಆಕಳಿಕೆಯ' ಹಾಗೆ. ಇನ್ನೊಬ್ಬರು ಆಕಳಿಸುವುದನ್ನ ಕಂಡರೆ ನಮಗೂ ಆಕಳಿಕೆ ಬರುತ್ತೆ. ಇಂಗ್ಲೀಷ್‌ನಲ್ಲಿ "RAPARTEE" ಎಂಬ ಪದವಿದೆ. ತಕ್ಷಣವೇ ಪ್ರತ್ಯುತ್ತರ ಕೊಡುವುದು; ಸರಸೋಕ್ತಿ - ಚತುರೋಕ್ತಿ ಆಗಿರಬಹುದು. ಅದೊಂದು ಕಲೆ ಎಲ್ಲರಿಗೂ ಲಭ್ಯವಾಗದು, ಕಲಿಯುವುದಲ್ಲ, ಸರಸೋಕ್ತಿಗಳ ಭಂಡಾರವೇ ಇರಬೇಕು. ನಮ್ಮಲ್ಲಿ ಬೀಚಿ, ರಾಶಿ, ನಾ. ಕಸ್ತೂರಿ, ಕೈಲಾಸಂ, ನಾಡಿಗೇರ ಕೃಷ್ಣರಾಯರು, ವೈ.ಎನ್.ಕೆ. ಅಂತಹ ಕೆಲವರಲ್ಲಿ ಅಂತಹ ಆಶು ಪ್ರತ್ಯುತ್ತರ ಚಾತುರ್ಯವಿತ್ತು. ಇಂಗ್ಲೀಷ್ ಸಾಹಿತ್ಯದಲ್ಲೂ ಅಪಾರವಾಗಿ ಕಾಣಬಹುದು.

ಅದೊಂದು ದೊಡ್ಡ ಮಹಿಳಾ ಸಂಘದ ಉತ್ಸವ. ಮುಖ್ಯ ಅತಿಥಿಯಾಗಿ ಜಾರ್ಜ್ ಬರ್ನಾರ್ಡ್ ಷಾ ಹೋಗಿದ್ದ ಭಾಷಣದ ಪ್ರಾರಂಭದಲ್ಲೇ ಅವನ ಮಾತು ಕೇಳಲು ಉತ್ಸುಕರಾಗಿ ಕೂಡಿದ್ದ ಹೆಣ್ಣುಮಕ್ಕಳನ್ನು ಉದ್ದೇಶಿಸಿ....

"God has created women as fools..." (ದೇವರು ಹೆಂಗಸರನ್ನು ಮೂರ್ಖರಾಗಿ ಸೃಷ್ಟಿಸಿದ್ದಾನೆ) ಅಂದಾಗ, ಸಭೆಯಲ್ಲಿ ಭಾರೀ ಕೋಲಾಹಲ ಉಂಟಾಯಿತು... ಹೆಂಗಸರೆಲ್ಲಾ ಕೈ ಎತ್ತಿ ವಿರೋಧದ ಕೂಗು ಕೂಗಲು ಪ್ರಾರಂಭಿಸಿದರು.... ಷಾ ತನ್ನ ದಾಡಿಯ ಮೇಲೆ ಕೈಯಾಡಿಸುತ್ತ - ''ಸ್ವಲ್ಪ ತಾಳಿ.... ನಾನು ನನ್ನ ವಾಕ್ಯವನ್ನು ಇನ್ನೂ ಪೂರ್ತಿ ಮಾಡಿಲ್ಲ'' ಎಂದು.... "God has created women as fools... to match Men" ಎಂದಾಗ ಚಪ್ಪಾಳೆಯ ಸುರಿಮಳೆ... ಇದು Reparteeಗೆ ಒಂದು ಉದಾಹರಣೆ.

ನಾನು ಬ್ಯಾಂಕಿನಲ್ಲಿ ಅಧಿಕಾರಿಯಾಗಿದ್ದೆ. ಬ್ಯಾಂಕಿನ ವಲಯದಲ್ಲಿ ಒಂದು ಮಾತಿದೆ.... "Bankers seldom laugh" ಎಂದು ಸ್ವಲ್ಪ ಮಟ್ಟಿಗೆ ಅದು ನಿಜವೂ ಹೌದು. ಸರ್ಕಾರಿ ಕಚೇರಿಯಲ್ಲಿರುವ ಅಧಿಕಾರಿಗಳು ಮತ್ತು ಕೆಲವು ಖಾಸಗಿ ಕಂಪನಿಯ ಉದ್ಯಮಿಗಳು ನಗುವುದೇ ಕಡಿಮೆ. ನಗದಿದ್ದರೆ ಪರವಾಗಿಲ್ಲ, ನಗುಮುಖವನ್ನೂ ಇಟ್ಟುಕೊಳ್ಳುವುದಿಲ್ಲ. They wear a wry face... ಅದೇನೇ ಇರಲಿ... ಬ್ಯಾಂಕಿನಲ್ಲಿ ಕೆಲಸದ ಒತ್ತಡವೋ ಏನೋ ನಗುವುದು ಅಪರೂಪ... ಬ್ಯಾಂಕ್ ಮ್ಯಾನೇಜರುಗಳು ನಕ್ಕರೆ ಜನ ಸಾಲ ಕೇಳುತ್ತಾರೆಂಬ ಭಯ, ಇಲ್ಲವೇ ಕೊಟ್ಟ ಸಾಲದ ಮರುಪಾವತಿ ಆಗುತ್ತದೋ ಇಲ್ಲವೋ ಎಂಬ ಭಯ.... ಅದೆಲ್ಲಾ ಮೋಜಿನ ಮಾತುಗಳು.

-★★★--★★★--★★★--★★★--★★★--★★★--★★★--★★★--★★★--★★★-

**ವಿದೇಶದಲ್ಲಿ ನಡೆದ ಚಿತ್ರೋತ್ಸವದಲ್ಲಿ ಪ್ರದರ್ಶನಗೊಂಡ ಮೊದಲ ಕನ್ನಡ ಸಿನಿಮಾ - ನಾಂದಿ**

ಒಂದಂತೂ ಸತ್ಯ.... ನಗುಮುಖ ಅಪರೂಪವಾಗಿದೆ. ಯುವಕ-ಯುವತಿಯರೂ ಕೂಡ ಜಗತ್ತಿನ ಭಾರವನ್ನೆಲ್ಲಾ ತಮ್ಮ ಹೆಗಲ ಮೇಲೆ ಹೊತ್ತಿರುವ ಹಾಗೆ ಕಾಣುತ್ತಾರೆ.... ನವ ಯೌವ್ವನದ ಸುಂದರ ಹೆಣ್ಣುಗಳ ಮುಖಗಳು ಕೂಡ DRY and DRAB ಆಗಿರುತ್ತೆ! (ನಮ್ಮ ರಸಿಕತೆಗೆ ಇದೊಂದು ಆಘಾತ!!). ಈ ಕಾಲ ಏನಿದ್ದರೂ "getting and spending" ಆಗಿದೆ. ಅಂತಹವರ ಕೌಟುಂಬಿಕ ಬದುಕೂ ಕೂಡ ನೀರಸವಾಗುತ್ತಿದೆ. ಮುಖ ಸಿಂಡರಿಸಿಕೊಂಡು ಬದುಕುತ್ತಿರುವ ದಂಪತಿಗಳನ್ನು ನೋಡಿದಾಗ... ಅಯ್ಯೋ... ನಗುನಗುತ್ತಾ ಇರಬಾರದೆ ಎನ್ನಿಸುತ್ತೆ. ಇದೂ ಒಂದು ಬದುಕೇ, ಬರಡಾಗುತ್ತಿದೆ ಆಧುನಿಕ ಜೀವನ..!

ಯಾಕೆ? ನಗಬಾರದೆ? ಅದಕ್ಕೇನು ಕಾಸು ಕೊಡಬೇಕೆ? ಟ್ಯಾಕ್ಸ್ ಇದೆಯೇ? ದೇವರು ನಮಗೆ ಕೊಟ್ಟಿರುವ ಒಂದು ವರ ಈ ನಗು. ನಗಬಾರದೇಕೆ? ನಕ್ಕರದೇ ಸ್ವರ್ಗ. ಒತ್ತಡದ ಬದುಕನ್ನು ಹಗುರ ಮಾಡಲು ಇರುವುದೊಂದೇ ಮಾರ್ಗ 'ನಗು', ನಗು ಸರ್ವರೋಗ ನಿವಾರಕ, ಸಂಜೀವಿನಿ - PANACEA.... ಇದು ಗೊತ್ತಿಲ್ಲದೆ ನಾವು ಸುಖ ಜೀವನದಿಂದ ವಂಚಿತರಾಗಿದ್ದೇವೆ!

''ನಗು'' ಎಲ್ಲಿ ಸಿಗುತ್ತದೆ? ಮಾರ್ಕೆಟ್‌ನಲ್ಲಲ್ಲ - ಮಾರಾಟ ವಸ್ತುವಾಗಿ; ಬೇರೆಲ್ಲಿಯಾದರೂ ಕಡವಾಗಿ - ಸಾಲವಾಗಿ ತರಬಹುದೇ? ಬೇಕಿಲ್ಲ. ''ನಗು''ವನ್ನು ಹುಡುಕಿಕೊಂಡು ಹೋಗಬೇಕಿಲ್ಲ. ಅದು ನಮ್ಮಲ್ಲಿಯೇ ಇದೆ. ಅದನ್ನೇ SENSE OF HUMOUR - ಎನ್ನಬಹುದು.

ದಿನನಿತ್ಯ ನಾವು ನೋಡುವ - ಕೇಳುವ ಅನೇಕ ಪ್ರಸಂಗಗಳಲ್ಲಿ ನಗು ತುಂಬಿರುತ್ತದೆ. ಅದನ್ನು ನಾವು ಅರ್ಥೈಸುವ ರೀತಿಯಲ್ಲಿದೆ ನಗುವಿನ ಚಿಲುಮೆ. ಉದಾಹರಣೆಗಾಗಿ ಬ್ಯಾಂಕ್ ಅಧಿಕಾರಿಯಾಗಿದ್ದ ನನ್ನ ಅನುಭವದ ಕೆಲವು ಘಟನೆಗಳನ್ನು ಹೇಳುತ್ತೇನೆ.

ನನ್ನ ಬ್ಯಾಂಕಿನ ಕೆಲಸದ ಕಾಲದಲ್ಲಿ ಕೆಲವು ಹಿರಿಯ ಗ್ರಾಹಕರು ಬೇರೆ ಯಾರಿಗೂ ಗೊತ್ತಾಗಬಾರದೆಂದು ತಿಳಿಸಿ ನಿಶ್ಚಿತ ಠೇವಣಿ(FIXED DEPOSIT)ಯಲ್ಲಿ ಹಣ ಹೂಡುತ್ತಿದ್ದರು. ಆಗ ನಾಮ ನಿರ್ದೇಶನ (Nomination) ಪದ್ಧತಿ ಅಷ್ಟಾಗಿ ಚಾಲನೆಯಲ್ಲಿರಲಿಲ್ಲ. ಅಂತಹ ಗ್ರಾಹಕರ ಆಕಸ್ಮಾತ್ ಮರಣದಿಂದಾಗಿ ಅವರ ಮಕ್ಕಳಿಗೆ ಅಥವಾ ಸಂಬಂಧಿಕರಿಗೆ ಕೂಡಿಟ್ಟ ಹಣ ಸುಲಭವಾಗಿ ಸಿಗುತ್ತಿರಲಿಲ್ಲ. ಆ ಹಣ ಪಡೆಯಲು ಅನುವಂಶಿಕತೆಯ ಬಗ್ಗೆ ವಿವರ ಮತ್ತು ಪ್ರಮಾಣ ಪತ್ರ ಬ್ಯಾಂಕಿಗೆ ಸಲ್ಲಿಸಬೇಕು. ಅದನ್ನು Claim applicationಗೆ ಲಗತ್ತಿಸಬೇಕು. ಅದೇನೆ ಇರಲಿ, ಹೀಗೆ ಬಂದ ಒಂದು ಅರ್ಜಿಯ ಕಥೆ ಏನೆಂದರೆ ಅರ್ಜಿಯಲ್ಲಿ ಮೂಲ ಅರ್ಜಿದಾರರು ನಮೂದಿಸಿದ್ದ ದಿವಂಗತರ ಹೆಸರು ಮತ್ತು ಅರ್ಜಿದಾರರು ಕೊಟ್ಟ ಈಗಿನ ಹೆಸರು ಭಿನ್ನ ಭಿನ್ನವಾಗಿತ್ತು. ಹಾಗಾಗಿ ಪ್ರಧಾನ

-★★★--★★★--★★★--★★★--★★★--★★★--★★★--★★★--★★★--★★★-

**ಸಂಸತ್ತಿನಲ್ಲಿ ಮೊದಲ ಬಾರಿ ಕನ್ನಡದಲ್ಲಿ ಮಾತಾಡಿದ ಕನ್ನಡಿಗ**
**- ಜೆ.ಎಚ್. ಪಟೇಲ್**

ಕಚೇರಿಯವರು ಒಂದು ಪತ್ರವನ್ನು ಅರ್ಜಿದಾರರಿಗೆ ಬರೆದರು. ಅದರ ಒಕ್ಕಣಿಕೆ ಹೀಗಿತ್ತು. ''ನಿಮ್ಮ ಅರ್ಜಿಯಲ್ಲಿರುವ ನಿಮ್ಮ ತಂದೆ ಹೆಸರು ಮತ್ತು ಅವರು ಖಾತೆ ಪ್ರಾರಂಭದಲ್ಲಿ ಕೊಟ್ಟಿರುವ ಹೆಸರು ಬೇರೆ ಬೇರೆಯಾಗಿದೆ. ಆದ್ದರಿಂದ ದಯವಿಟ್ಟು ನಿಮ್ಮ 'Correct Father' ಹೆಸರನ್ನು ತಿಳಿಸಿ. ತಂದೆಯನ್ನ ಕಳೆದುಕೊಂಡಿರುವವರು ಎಷ್ಟು ಬೇಸರಿಸಿಕೊಂಡರೋ?''

ನಾನು ಕೆನರಾಬ್ಯಾಂಕಿನಲ್ಲಿ Staff Officer ಆಗಿದ್ದಾಗ ನಡೆದದ್ದು, ಆ ಕಾಲದಲ್ಲಿ 'ಏಕವ್ಯಕ್ತಿ ಶಾಖೆ' (One man Branch) ಶುರುಮಾಡಿ ಅನೇಕ ಚಿಕ್ಕ ಊರುಗಳಲ್ಲಿ ಅವು ಕೆಲಸ ಮಾಡುತ್ತಿದ್ದವು. ಅಂತಹ ಶಾಖೆಯ ಮ್ಯಾನೇಜರ್ ತುರ್ತಾಗಿ ರಜೆಯ ಮೇಲೆ ಹೋಗುವುದು ಕಷ್ಟವಾಗಿತ್ತು. ಹಾಗಿದ್ದಾಗ ಏಕವ್ಯಕ್ತಿ ಶಾಖೆಯ ಮ್ಯಾನೇಜರ್‌ನಿಂದ ಒಂದು ಟೆಲಿಗ್ರಾಂ ಬಂದಿತ್ತು. Wife is ill, Please send a substitute; ನನಗಿದು ವಿಚಿತ್ರವೆನಿಸಿತು. ಅವನ ಹೆಂಡತಿಗೆ ನಾನು ಹೇಗೆ Substitute ಕಳಿಸಲಿ? ನನ್ನ ಇಲಾಖೆಯಿಂದ ಒಂದು ಟೆಲಿಗ್ರಾಂ ಹೋಯಿತು.

"No substitute is available, please arrange locally..." ಎಂದು.

ಬ್ಯಾಂಕಿನಲ್ಲಿ ನಾನು ಎರಡು ಎಮ್ಮೆಗಳಿಗೆ ಸಾಲಕೊಟ್ಟಿದ್ದೆ. ಸಾಲಪಡೆದಿದ್ದ ಹೆಣ್ಣುಮಗಳು ಕೆಲವು ತಿಂಗಳುಗಳು ಕ್ರಮವಾಗಿ ಕಂತುಗಳನ್ನು ಕಟ್ಟುತ್ತಿದ್ದಳು. ಏನಾಯಿತೋ ಏನೋ ಆರು ತಿಂಗಳ ಕಾಲ ಕಂತು ಬರಲಿಲ್ಲ. ವಿಚಾರಿಸಲು ಆಕೆಯ ವಾಸ ಸ್ಥಳಕ್ಕೆ ಹೋದೆ. ನಾನು ''ಬ್ಯಾಂಕ್ ಮ್ಯಾನೇಜರ್'' ಅಂತ ಗೊತ್ತಾಗಿ ಭಕ್ತಿ ಭಾವದಿಂದ ನಮಸ್ಕರಿಸಿದಳು.

''ಏನ್ ಬುದ್ಧಿ – ನಮ್ಮ ಮನೇಗಂಟ ಬಂದ್ಬುಟ್ಟೀರಿ?''

''ಎಮ್ಮೆ ಸಾಲ ಕಣಮ್ಮ......''

ಅವಳ ಮುಖ ಸಪ್ಪಗಾಯಿತು, ಸೀರೆಯ ಸೆರಗಿನ ತುದಿಹಿಡಿದು ಮುಸುಮುಸು ಅಳಲು ಪ್ರಾರಂಭವಾಗಿ...

''ಬುದ್ಧೀ... ಎಲ್ಡು ತಿಂಗಳ ಕೆಳ್ಗೆ ಬರಬಾರದ ಕಾಯ್ಲೆ ಬಡ್ಕಂಡು ಎಮ್ಮೆ ಗೊಟಕ್ ಅಂದ್ಬುಡ್ತು ಬುದ್ಧಿ.. ನಾನ್ ಸುಳ್ಳೇಳಕ್ಕಿಲ್ಲ ಒಡೆಯಾ... ನನ್ನ ಇತ್ತಲಾಗೆ ಊಳಿನ್ನಿ.. ಶಲಾಕೆ ಅದೆ... ಕೊಡ್ತೀನಿ... ಅಗಿದು ನೋಡಿ ಪರೀಸ್ಸೆ ಮಾಡ್ಕಳ್ಳಿ ಬುದ್ಧಿ....'' ಅನ್ನುತ್ತಾ ಮೂಲೆಯಲ್ಲಿದ್ದ ಗುದ್ದಲಿ ತರಲು ಎದ್ದಾಗ...

''ಅಮ್ಮಾ... ನಾನು ಆ ಕೆಲ್ಸ ಮಾಡೋಕೆ ಬಂದಿಲ್ಲ, ಕಂತು ಬಂದಿಲ್ಲ ವಿಚಾರಿಸಿಕೊಂಡು ಹೋಗೋಣ ಅಂತ ಬಂದೆ ಅಷ್ಟೆ (ಆಗ ನನಗನ್ನಿಸಿದ್ದು I am a Banker, not a gravedigger!) ಅಲ್ಲಮ್ಮ... ನಾನು ಎರಡು ಎಮ್ಮೇಗಲ್ವ ಸಾಲಕೊಟ್ಟಿರೋದು... ಇನ್ನೊಂದು

-★★★--★★★--★★★--★★★--★★★--★★★--★★★--★★★--★★★--★★★-

**ಕವಿ ರನ್ನನಿಂದ ರಚಿತವಾದ ಕನ್ನಡದ ಮೊದಲ ನಿಘಂಟು – ರನ್ನಕಂದ**

ಎಮ್ಮೆಯಿಂದ ಬರೋ ಹಣದಲ್ಲಿ ಸ್ವಲ್ಪವಾದ್ರೂ ಸಾಲಕ್ಕೆ ಕಟ್ಟಬಹುದಲ್ಲಮ್ಮ'' ಅಂದೆ. ''ಅಯ್ಯೋ, ನನ್ನಪ್ಪ – ನನ್ನ ಅಣೇಬರ ಚಂದಾಗಿಲ್ಲ, ಇನ್ನೊಂದು ಎಮ್ಮೆ ಗಬ್ಬ ಕಟ್ಟಲಿಲ್ಲ.. ಅದ್ಯಂಗೆ ಆಲು ಕೊಟ್ಟೀತು ಬುದ್ಧಿ, ಎಲ್ಡು ಹೊರೆ ಹುಲ್ಲು ತಿಂತದೆ, ನಾಲ್ಕು ಮಕರಿ ಸಗಣಿ ಆಗ್ತದೆ ಅಷ್ಟೇಯ..''

''ಆ ಎಮ್ಮೆ ಮಾರಿಬಿಡು.. ಅದರಲ್ಲಿ ಬರೋವಷ್ಟು ಸಾಲ ಕಟ್ಟು.. ಮಿಕ್ಕಿದ್ದು ನೋಡೋಣ...''

''ಬುದ್ಧಿ ಆ ಆಲು ಕರೀದೆ ಇರೋ ಎಮ್ಮೇನ ಅದ್ಯಾವನು ತಗೊಂಡಾನು? ನಾನು ಒಂದು ಕೆಲ್ಸ ಮಾಡ್ಲ ಬುದ್ಧಿ ಆ ಎಮ್ಮೇನ ನಿಮ್ಮ ಮನೇಲಿ ತಂದು ಕಟ್ತೀನಿ, ಒಸಿ ಹುಲ್ಲಿಗೆ ಏರ್ಪಾಟು ಮಾಡ್ಬುಡಿ.. ನಾನೇ ಜಿನಾ ಬಂದು, ಶೆಗಣಿ ಎತ್ತಿ, ನಿಮ್ಮನೆ ಹಿತ್ತಲ ಕಡೆ ಗೋಡೆಮ್ಯಾಗೆ ಶೆಗಣಿ ತಟ್ಟಿ, ಒಣಗಿಸಿ, ಬೆರಣಿ ಮಾರಿ ದುಡ್ಡು ಕಟ್ತೀನಿ..''

''ಅಮ್ಮಾ.. ಅದೆಲ್ಲಾ ಆಗಲ್ಲ.. ಎಮ್ಮೆ ಸಾಕಿ, ಅದಕ್ಕೆ ತಿನ್ನಕ್ಕೇನಾದರೂ ಕೊಟ್ಟು ಕಾಪಾಡುವುದು ನನಗೆ ಆಗಲ್ಲ.. ನಾನು ಬ್ಯಾಂಕ್ ಮ್ಯಾನೇಜರ್... ಬೆರಣಿ ಮಾರೋ ಬ್ಯಾಂಕರ್ ಅಲ್ಲ..'' ಅಂತ ಹೇಳಿ ಅಲ್ಲಿಂದ ತಪ್ಪಿಸಿಕೊಂಡು ಬಂದದ್ದೇ ಒಂದು ಸಾಹಸ!

ಬ್ಯಾಂಕುಗಳಲ್ಲಿ ನಿಶ್ಚಿತ ಠೇವಣಿಯನ್ನು (Fixed Deposits) ಇಟ್ಟಿರುವವರಿಗೆ ಅದರ ಅವಧಿ ಪೂರೈಸುವ ಮುನ್ನ ಅದರ ನವೀಕರಣ ಮಾಡಲು ಪತ್ರ ಬರೆಯುವ ಪದ್ಧತಿ ಇತ್ತು. ಈಗ ಕೆಲವು ಬ್ಯಾಂಕಿನ ಸಂಸ್ಥೆಯನ್ನು ಹೊರತುಪಡಿಸಿ ಈ ಪದ್ಧತಿ ಇಲ್ಲ. ನಾನು ಮ್ಯಾನೇಜರನಾಗಿದ್ದ ಒಂದು ಶಾಖೆಯಲ್ಲಿ ಠೇವಣಿಯ ಅವಧಿ ಮುಗಿಯುತ್ತಿರುವ ಬಗ್ಗೆ ಠೇವಣಿದಾರನಿಗೆ ತಿಳಿಸುವುದು ಮಾಡಿರಲಿಲ್ಲ. ಠೇವಣಿದಾರನೇ ಠೇವಣಿ ರಶೀತಿಯನ್ನು ಕೈಯಲ್ಲಿ ಹಿಡಿದು, ಕಡುಕೋಪದಿಂದ ನನ್ನ ಗಾಜಿನ ಕ್ಯಾಬಿನ್ ಸೀಳಿಹೋಗುವಂತೆ ಒಳನುಗ್ಗಿ ''ಏನ್ರೀ.. ಮ್ಯಾನೇಜರ್... ನನ್ನ ಠೇವಣಿ ಅವಧಿ ಮುಗಿಯುತ್ತಿದೆ ಎಂದು ಒಂದು ಸೂಚನಾ ಪತ್ರ ಬರೆದಿಲ್ಲ... ಜ್ಞಾಪಕದಲ್ಲಿಟ್ಟುಕೊಂಡು ನಾನೇ ಬಂದೆ. ನಿಮ್ಮ ಬ್ಯಾಂಕಿನಲ್ಲಿ ಸರಿಯಾಗಿ ಕೆಲಸ ನಡೆಯುತ್ತಿಲ್ಲ... ನನ್ನ ಹಣ ನನಗೆ ವಾಪಸ್ಸು ಮಾಡಿ...'' ಅಂತ ಕೂಗಾಡುತ್ತಿರುವಾಗ ಅವರನ್ನು ಸಮಾಧಾನ ಮಾಡಿ, ಸಂಬಂಧಪಟ್ಟ ಡಿಪಾರ್ಟ್‌ಮೆಂಟಿನವರನ್ನು ಕರೆಸಿ ಠೇವಣಿದಾರನ ಎದುರಿಗೆ ಬೈದು ಹಾರಾಡಿದೆ. ''ಸಾರಿಸರ್'' ಅಂತ ಹೇಳಿ ಅವರಿಗೆ ಕಳಿಸಿದೆ. ಕೂಡಲೇ ನನ್ನ ಶಾಖೆಯ ಸಿಬ್ಬಂದಿ ಅದರ ಬಗ್ಗೆ ಒಂದು ಪತ್ರವನ್ನು ಅವಸರದಲ್ಲಿ ಸಿದ್ಧಪಡಿಸಿ ಸಂಬಂಧಪಟ್ಟ ಅಧಿಕಾರಿಯಿಂದ ಸಹಿ ಹಾಕಿಸಿ ಪತ್ರ ರವಾನಿಸಿದರು. ಮೂರು ದಿನಗಳಾದ ಮೇಲೆ ಅದೇ ಠೇವಣಿದಾರ ಮೊದಲಿಗಿಂತಲೂ ಹೆಚ್ಚು ಸಿಟ್ಟಿನಿಂದ ನನ್ನ ಕ್ಯಾಬಿನ್ ಒಳಗೆ ನುಗ್ಗಿ....

-★★★--★★★--★★★--★★★--★★★--★★★--★★★--★★★--★★★--★★★-

**ಕನ್ನಡದ ಮೊದಲ ಜ್ಯೋತಿಷ್ಯ ಗ್ರಂಥ – ಶ್ರೀಧರಾಚಾರ್ಯನ ಜಾತತಿಲಕ**

''ಏನ್ರೀ ಮ್ಯಾನೇಜರ್... ಹೀಗೇನ್ರೀ ಬರೆಯೋದು.. ಅದ್ಯಾವನ್ರೀ ಈ ಕಾಗದ ಸಹಿ ಮಾಡಿರೋನು? ಅವನಿಗೆ ತಲೆ ಸರಿಯಾಗಿದೆಯೊ.....'' ಇತ್ಯಾದಿಯಾಗಿ ಕಿರುಚಾಡುತ್ತಿದ್ದಾಗ ಅಲ್ಲಿದ್ದ ಗ್ರಾಹಕರೆಲ್ಲರ ದೃಷ್ಟಿ ನಮ್ಮ ಕಡೆಗೇ ಇತ್ತು.

''ನೋಡ್ರೀ.... ನಿಮ್ಮ ಕಾಗದ.... ಹೇಗಿದೆ'' ಎಂದು ಠೇವಣಿದಾರ ನಮ್ಮ ಬ್ಯಾಂಕಿನ ಪತ್ರವನ್ನು ನನ್ನ ಮೇಲೆ ಕಲ್ಲು ಎಸೆದ ಹಾಗೆ ಬಿಸಾಡಿದ. ನಾನು ಹೆದರಿದೆ... ಪತ್ರ ಓದಿದೆ.... ಒಂದು ಕಡೆ ಬ್ಯಾಂಕಿನ ತಪ್ಪಿನ ಬಗ್ಗೆ ಸಿಟ್ಟುಬಂತಾದರೂ, ನಾನು ಕಷ್ಟದಿಂದ ನನ್ನ ನಗುವನ್ನು ತಡೆದುಕೊಂಡೆ. ಆ ಕಾಗದ ಹೀಗಿತ್ತು;


"Dear Sir,

Your Deposit No:............ is expiring on........... May be request you to kindly renew the same before you expire....

We thank you for your co-operation"

ಹೇಳಿ... ಯಾರಿಗೆ ತಾನೆ ಸಿಟ್ಟು ಬಾರದು.. ಉಕ್ಕಿ ಬರುವ ನಗು ತಡೆಹಿಡಿದು ಗ್ರಾಹಕನನ್ನು ಸಮಾಧಾನ ಮಾಡಿ ಕಳಿಸಿದ್ದು ಬೇರೆ ವಿಚಾರ.

(ಮುಂದುವರೆಯುವುದು)....




**ಬಾದಾಮಿ, ಪಟ್ಟದಕಲ್ಲು ಪುನ್ನಾಟಗಳನ್ನು ತನ್ನ ಕ್ರಿ.ಶ. 130ರ ಗ್ರಂಥದಲ್ಲಿ ಉಲ್ಲೇಖಿಸಿದ ಮೊದಲ ಗ್ರೀಸ್ ಭೂಗೋಳ ಶಾಸ್ತ್ರಜ್ಞ - ಟಾಲೆಮಿ**

# ರಂಗವ್ವನ ರೇಷ್ಮೆ ಸೀರೆ

**- ವೈ.ಎನ್. ಗುಂಡೂರಾವ್**

ಇದು ಸುಮಾರು ಐವತ್ತು ಅರವತ್ತು ವರ್ಷಗಳ ಹಿಂದಿನ ಮಾತು. ಹಳ್ಳಿಗಳ ಕಡೆ ಐದು ಹತ್ತು ರೂಪಾಯಿಗಳ ನೋಟು ನೋಡುವುದೇ ಕಷ್ಟ. ಆಗೆಲ್ಲ ವ್ಯವಸಾಯದ ಕೂಲಿಗಾಗಿ ಅಥವಾ ಮತ್ತಾವುದೇ ಕೆಲಸಕ್ಕಾಗಿ ಬಂದವರಿಗೆ ನಾಲ್ಕಾಣೆ ಎಂಟಾಣೆ ಕೂಲಿ ಕೊಟ್ಟರೆ ಅದೇ ಜಾಸ್ತಿ. ಅದಕ್ಕೆ ಬದಲಾಗಿ ಒಂದು ಸೇರು ರಾಗಿ, ಒಂದು ಸೇರು ಜೋಳ, ಒಂದು ಸೇರು ಭತ್ತವನ್ನೋ ಕೂಲಿ ಕಾಸಿಗೆ ಬದಲಾಗಿ ಪಡೆದು ಹೋಗುತ್ತಿದ್ದರು. ಪದಾರ್ಥಗಳ ಬೆಲೆಯೂ ಹಾಗೆಯೇ ಇತ್ತು. ಒಂದು ರೂಪಾಯಿಗೆ ಸೇರು ರಾಗಿ, ಜೋಳ, ಅಕ್ಕಿ ಮುಂತಾದುವು ಸಿಗುತ್ತಿದ್ದ ಕಾಲ. ಹಣಕ್ಕೆ ವಿಪರೀತ ಬೆಲೆಯಿದ್ದು ಹಣ ಕೈಲಿ ಓಡಾಡುತ್ತಿದ್ದುದೇ ವಿರಳ. ಹಣಕ್ಕೆ ಪದಾರ್ಥಗಳ ವಿನಿಮಯವೇ (Barter System) ಜಾಸ್ತಿ.

**ರಂಗವ್ವನ ರೇಷ್ಮೆ ಸೀರೆ ಇಬ್ಭಾಗವಾಗಿದ್ದು ಏಕೆ?**

ಹೀಗಿರುವಾಗ ಪಟೇಲ ನಂಜುಂಡಪ್ಪನ ಹೆಂಡತಿ ರಂಗವ್ವ ಅದು ಹೇಗೋ ನೂರ ಇಪ್ಪತ್ತೈದು ರೂಪಾಯಿಗಳಿಗೆ ಒಂದು ರೇಷ್ಮೆ ಸೀರೆ ಕೊಂಡು ಬಂದಳೆಂದರೆ ಇಡೀ ಹಳ್ಳಿಗೇ ಸುದ್ದಿಯಾಯಿತು. ಅಂದಿನ ಬೆಲೆಯಲ್ಲಿ ಎಂಟು ಹತ್ತು ರೂಪಾಯಿ ಕೊಟ್ಟು ನೂಲಿನ ಸೀರೆ ಕೊಳ್ಳುವುದೇ ಕಷ್ಟ. ಮೇಲ್ವರ್ಗದವರು ಯಾರಾದರೂ ಉಟ್ಟು ಹಳೆಯದಾದ ಸೀರೆಯನ್ನು ಕೊಟ್ಟರೆ ಸಾಕೆಂದು ಕಾಯುತ್ತಿತ್ತು ಕೆಳವರ್ಗದ ಜನತೆ. ಅಂಥಾದ್ರಲ್ಲಿ ನೂರ ಇಪ್ಪತ್ತೈದು ರೂಪಾಯಿಗಳ ಸೀರೆ, ಅದರಲ್ಲೂ ರೇಷ್ಮೆ ಸೀರೆ ಕೊಂಡು ಬಂದಿದ್ದಾರೆಂದರೆ ಇದೊಂದು ಆ ತಾಲ್ಲೂಕಿನ ಅತ್ಯದ್ಭುತಗಳಲ್ಲೊಂದಾಗಿ ಹೋಗಿತ್ತು.

ಯಾರಿಗೇ ಆಗಲಿ ಯಾವುದಾದರೊಂದು ವಸ್ತುವನ್ನು ಕೊಂಡಾಗ ಅದನ್ನು ಅಕ್ಕಪಕ್ಕದವರಿಗೆ ತೋರಿಸದಿದ್ದರಾಯಿತೇ? ಇಷ್ಟಕ್ಕೂ ಕೊಂಡಿದ್ದಾದರೂ ಏತಕ್ಕೆ? ಅದೂ ಅಲ್ಲದೇ, ಇಂತಹ ಅಪರೂಪದ ವಸ್ತುವೊಂದು ತನ್ನ ಬಳಿ ಇದೆ ಎಂಬುದು ಇತರರಿಗೆ ತಿಳಿಯದಿದ್ದರೆ ಹೇಗೆ? ಅಕ್ಕಪಕ್ಕದವರಿಗೆಲ್ಲ ತೋರಿಸಿದಳು. ಸೀರೆಯ ಸೆರಗು, ಒಡಲು, ಚಿನ್ನದ ಎಳೆಗಳ ಕೂಟತ್ತಿನ (ಜರಿಯ) ಅಂಚು, ಅದೆಲ್ಲಕ್ಕಿಂದ ಹೆಚ್ಚಿನದೆಂದರೆ ಸೀರೆಯ ಒಡಲ ನವಿಲಿನ ಬಣ್ಣ, ದಾವಣಿ ಉಟ್ಟ ಹುಡುಗಿಯರಿಂದ ಹಿಡಿದು ನೂಲಿನ ಸೀರೆ ಸುತ್ತುಕೊಳ್ಳುತ್ತಿದ್ದ ತೊಂಭತ್ತು ವರ್ಷದ ಲಕ್ಷ್ಮವ್ವನವರೆಗೂ ಎಲ್ಲರೂ ಬಂದು ಸೀರೆಯನ್ನು ನೋಡೇ ನೋಡಿದರು. ಆಗೆಲ್ಲ ಹಳ್ಳಿಗಳಲ್ಲಿ ನೂಲಿನ ಸೀರೆಯಲ್ಲದೆ ಮತ್ಯಾವ ಸೀರೆ ಸಿಗಬೇಕು – ಪಟ್ಟಣಗಳಲ್ಲಿ ರೆಯಾನ್, ಪಾಲಿಯೆಸ್ಟರ್, ಟೆರಿಲಿನ್ ಬಟ್ಟೆಗಳು ಕಣ್ಣು ಬಿಡುತ್ತಿದ್ದ ಕಾಲ.

--★★★--★★★--★★★--★★★--★★★--★★★--★★★--★★★--★★★--★★★--

**ಕನ್ನಡದ ಮೊದಲ ವಚನಕಾರ - ಜೇಡರ ದಾಸಿಮಯ್ಯ**

ಬಂದವರೆಲ್ಲರೂ ರಂಗವ್ವನ ರೇಷ್ಮೆಯನ್ನು ಮುಟ್ಟಿ ಮುಟ್ಟಿ ನೋಡಿದರು. ಎಷ್ಟು ಮುಟ್ಟಿ ನೋಡಿದರೂ ತೃಪ್ತಿಯಾಗದು. ಬಂದವರೇ ಮತ್ತೆ ಮತ್ತೆ ಹೊಸಬರ ಜೊತೆ ಸೇರಿಕೊಂಡು ಅದರ ನಯಗಾರಿಕೆಯನ್ನು ಬೆರಳು ತುದಿಯಲ್ಲಿ ಸವರಿ, ಸವರಿ ಸ್ಪರ್ಶ ಸುಖವನ್ನನುಭವಿಸಿದರು. ‘‘ಬುಡು ರಂಗವ್ವ, ಇಂಥಾ ಸೀರ್ಯ ಮೈಸೂರ್ನಾಗೆ ಕೂಡಾ ನೋಡ್ನಿಲ್ಲ’’ ಎಂದು ಒಬ್ಬಳೆಂದರೆ, ‘‘ಚಾಮರಾಜನಗರದಾಗೆ ಸಾಹುಕಾರ ಚೆನ್ನಪ್ಪನ ಮಗಳ ಮದುವಿಗೋಗಿದ್ನಲ್ಲ, ಮದುವಿ ಎಣ್ ಕೂಡಾ ಇಂಥಾ ಸೀರ್ಯಾ ಉಟ್ಟಂಗಿರ್ನಿಲ್ಲ’’ ಎಂದು ಮತ್ತೊಬ್ಬಳು ಅನ್ನುತ್ತಿದ್ದಳು. ಇವು ಸಂತೋಷ ಉಂಟುಮಾಡಲೋ ಇಲ್ಲಾ ಕಂಡ ಸತ್ಯದ ಸಮಜಾಯಿಷಿಯೋ ಒಂದೂ ತಿಳಿಯದ ರಂಗವ್ವ ಹಿಗ್ಗಿ ಹೀರೇಕಾಯಿಯಾಗುತ್ತಿದ್ದುದಂತೂ ನಿಜ.

ಒಂದು ರವುಂಡು ನಾಷ್ಟಾ ಮಾಡಿ ಪಂಚಾಯಿತಿ ಕಟ್ಟೆ ಕಡೆ ಪಟೇಲರ ಸವಾರಿ ಹೊರಟರೆ ಇನ್ನು ಉಳಿದಿದ್ದ ಕೆಲಸ – ಹೊಲಗದ್ದೆಗಳಿಗೆ ಕೆಲಸಕ್ಕೆ ಹೋಗುವ ಆಳು ಕಾಳುಗಳಿಗೆ ಹಿಟ್ಟು ಕೊಟ್ಟು ಕಳುಹಿಸಿದರೆ ರಂಗವ್ವನಿಗೆ ಬಿಡುವು. ಹನ್ನೆರಡರ ಸುಮಾರಿಗೆ ಯಾರಾದರೂ ಬಂದು ‘‘ಸೀರೆ ತಗಂಬಂದಿದ್ದೀರಂತಲ್ಲವ್ವ ಎಂದರೆ ಸಾಕು ಮುಗಿಲ ಹಕ್ಕಿಯಾಗುತ್ತಿದ್ದ ರಂಗವ್ವ ಒಳಮನೆಯ ಹಜಾರದ ತೊಟ್ಟಿಲ ಹತ್ತಿರ ಕಟ್ಟಿದ್ದ ಉಯ್ಯಾಲೆಯ ಬಳಿ ಜೊಂಡಿನಿಂದ ನೇಯ್ದಿದ್ದ ಚಾಪೆಯನ್ನು ಹಾಸಿ ಹೊಸಾ ರೇಷ್ಮೆ ಸೀರೆಯನ್ನು ಹರವಿಬಿಡುತ್ತಿದ್ದಳು.’’

‘‘ಆಯ್, ಕೊಳ್ಯಾಗೋಯ್ತದೆ ಮುಟ್ ಬಾರ್ದು ಕಣಾ ಎಂದು ಬಂದಿದ್ದವರಲ್ಲಿ ಯಾರಾದರೊಬ್ಬರು ಬಿಚ್ಚಿ ತೋರಿಸಿದಾಗ ಅದರ ಬಣ್ಣ, ಜರಿ, ಸೆರಗಿನ ಬೆಡಗಿನ ಮೋಹಕ್ಕೆ ಒಳಗಾಗಿ ತಡೆದುಕೊಳ್ಳಲಾಗದೆ ಮುಟ್ಟಿ ಸುಖ ಅನುಭವಿಸದೇ ಹೋಗುತ್ತಿರಲಿಲ್ಲ.



ತಮ್ಮಲ್ಲಿಲ್ಲದಿರೋದು ಇನ್ನೊಬ್ಬರ ಬಳಿಯಲ್ಲಾದರೂ ಇದೆಯಲ್ಲ ಎಂಬ ಸಂತೋಷದ ಮನಃಸ್ಥಿತಿಯ ಮುಂದೆ ಹೊಟ್ಟೆಯುರಿ ಎಂಬ ಅಪದ್ಧ ಹುಡುಕಿದರೂ ಸಿಗದಂತಹ ಮುಗ್ಧ ಮನಸ್ಸು, ಮತ್ತ್ಯಾರದ್ದೋ ಬಳಿ ಕಂಡದ್ದನ್ನು ವಿವರಿಸುವಾಗಲೂ ತಮ್ಮ ಬಳಿಯೇ ಇದೆ ಎಂಬಂತೆ ಹೊಗಳಿ ವಿವರಿಸುವ ತಾದ್ಯಾತ್ಮತೆ. ಹಳ್ಳಿಗರಲ್ಲಿದ್ದ ಇಂತಹ ಮುಗ್ಧತೆ, ನಿಷ್ಕಲ್ಮಶ ಮನಸ್ಸು, ಮನಸ್ಸಿನಾಳದಿಂದಲೂ ಅನುಭವಿಸುವ ಸಂತೋಷದ ಗುಣಗಳು ಇಂತು ಪಟ್ಟಣಗಳಲ್ಲಿ ಹಾಗಿರಲಿ, ಹಳ್ಳಿಗಳಲ್ಲೂ ಹುಡುಕಿದರೂ ಕಾಣದು.’’

ಹೀಗೆ ಸುಮಾರು ದಿವಸ ತಾನು ಕೊಂಡ ಸೀರೆಯನ್ನು ರಂಗವ್ವ ಊರಮಂದಿಗೆಲ್ಲ ಪ್ರದರ್ಶಿಸಿದಳು. ನೋಡದವರಿಗೆ ಸಿಕ್ಕ ಸೀರೆ ಉಟ್ಟು ನೋಡಿದ ಸಂದರ್ಭವೆಂದರೆ ಶಾನುಭೋಗರ ಮಗಳು ಶಾಂತಲಕ್ಷ್ಮಿ

**ಭಾರತ ರತ್ನ ಪಡೆದ ಮೊದಲ ಕನ್ನಡ ವಿಜ್ಞಾನಿ**
**– ಸರ್. ಸಿ.ವಿ. ರಾಮನ್**

ಮದುವೆಯ ಸಂದರ್ಭದಲ್ಲಿ, ರಂಗವ್ವ ಕೂಡಾ ಕೊಂಚ ಎತ್ತರದ ಆಳೇ. ಅದಕ್ಕೊಪ್ಪುವ ಮೈಕೈ ತುಂಬಿಕೊಂಡ ಶರೀರ. ಶರೀರದ ಆಕಾರಕ್ಕೆ ತಕ್ಕಂತಹ ಗೋಧಿ ಬಣ್ಣದ ಚರ್ಮ. ಇಂತಹ ಶರೀರಕ್ಕೆ ನವಿಲ ಬಣ್ಣದ ರೇಷ್ಮೆ ಸೀರೆ ಒಪ್ಪದಿದ್ದೀತೆ? ಶಾಂತಲಕ್ಷ್ಮಿ ಮದುವೆಯ ದಿನ ಬ್ರಾಹ್ಮಣರ ಬೀದಿಯಲ್ಲಿ ಹಾಕಿದ ಐನೂರಡಿ ಉದ್ದದ ಚಪ್ಪರದಲ್ಲಿ ರಂಗವ್ವ ಹೊಸ ರೇಷ್ಮೆ ಸೀರೆಯುಟ್ಟು ಹಾಯ್ದು ಬಂದಾಗ ನಿಬ್ಬೆರಗಾದ ಹೆಂಗೆಳೆಯರು ಹಸೆಮಣೆ ಮೇಲೆ ಕುಳಿತ ಮದುಮಗಳನ್ನು ನೋಡುವುದು ಬಿಟ್ಟು ರಂಗವ್ವನನ್ನು ನೋಡುತ್ತಾ ಕುಳಿತುಬಿಟ್ಟರು. ಇಷ್ಟು ದಿವಸ ರಂಗವ್ವನ ಮನೆಗೆ ಹೋಗಿ ಸೀರೆ ನೋಡಿ ಬಂದಿದ್ದರೇ ವಿನಃ ಅದನ್ನು ಉಟ್ಟಾಗ ಕಾಣುವ ರೂಪವನ್ನು ಕಲ್ಪಿಸಲು ಕೂಡಾ ಆಗಿರಲಿಲ್ಲ. ಸಾಕ್ಷಾತ್ ಲಕ್ಷ್ಮಿಯೇ ಬಂದಳೇನೋ ಎನ್ನುವಂತೆ ನೋಡೇ ನೋಡಿದರು.

ಊಟವಾದ ನಂತರ ಮನೆಗೆ ಹೋದ ರಂಗವ್ವ ಕೆಲಸದ ನಿಂಗಿ ಕೈಲಿ ಹಂಚಿ ಕಡ್ಡಿ ಇಳಿ ತೆಗೆಸಿಕೊಂಡ ನಂತರ ಊಟದ ಸಮಯದಲ್ಲಿ ಸೀರೆಯ ಮೇಲೆ ಸಿಡಿದಿದ್ದ ಸಾರಿನ, ಹುಳಿಯ ಹನಿಗಳನ್ನು ನೀರಿನಿಂದ ಹಿತವಾಗಿ ಒರೆಸಿ, ನೆರಳಿನಲ್ಲಿ ಒಣಗಿಸಿ ಮಡಿಸಿ ಪೆಟಾರಿಯಲ್ಲಿ ಸೇರಿಸಿದಳು.

ಇಷ್ಟು ಹಣ ಸುರಿದುಕೊಂಡು ರೇಷ್ಮೆ ಸೀರೆಯನ್ನು ಮೆರೆಸಲು ದಿನಂಪ್ರತಿ ಉಡಲಾದೀತೇ? ಹಬ್ಬ ಹುಣ್ಣಿಮೆ ಬಂದಾಗ ಮಾತ್ರ ಅಬ್ಬಬ್ಬಾ ಅಂದರೆ ವರ್ಷಕ್ಕೆ ಒಂದೈದಾರು ಸಾರಿ ಮಾತ್ರ. ಉಡದಿದ್ದ ಸಂದರ್ಭಗಳಲ್ಲಿ ಮಡಿಸಿಟ್ಟು ಮಾಡುವುದಾದರೂ ಎಂಥದ್ದು? ಶಾನುಭೋಗರ ಮಗಳ ಮದುವೆಯ ದಿನ ಮದುವೆಯ ಹುಡುಗಿಯೇ ಉಡದಿದ್ದ ಜರ್ಬಾದ ಸೀರೆಯನ್ನು ರಂಗವ್ವ ಉಟ್ಟಿದ್ದು ಎಲ್ಲರೂ ಕಂಡ ದೃಶ್ಯ ಅಲ್ಲವೇ? ಸರಿ, ಶಾನುಭೋಗರ ಹೆಂಡತಿಯೇ ಬಂದು ''ಶಾಂತಲಕ್ಷ್ಮಿಯನ್ನು ಗಂಡನ ಮನೆಗೆ ಕರೆದೊಯ್ದು ಬಿಟ್ಟು ಬರಬೇಕು. ಸ್ವಲ್ಪ ನಿಮ್ಮ ರೇಷ್ಮೆ ಸೀರೆಯನ್ನು ಕೊಟ್ಟಿರ್ತೀರ, ಉಡಿಸಿ ಕಳಿಸ್ತೇನೆ'' ಎಂದಾಗ ರಂಗವ್ವನಿಗೆ ಅದೆಷ್ಟು ಸಂತೋಷದಿಂದ ಮೇಲಕ್ಕೆಸೆದಂತಾಗಿತ್ತು. ''ಅಯ್, ಅದಕ್ಯಾಕಷ್ಟು ಸಂಕೋಚ ಪಟ್ಕೋತೀರ, ತಗೊಂಡು ಹೋಗಿ ಉಡಿಸಿ'' ಎಂದು ಬ್ಯಾಗಿನಲ್ಲಿ ಹಾಕಿ ಕೊಟ್ಟೇ ಬಿಟ್ಟಳು. ರಂಗವ್ವನಿಗೆ ತಾನುಡುವ ಸಂತೋಷಕ್ಕಿಂತ ಬೇರೆಯವರೂ ಈ ರಂಗವ್ವನ ಸೀರೆಯಲ್ಲಿ ಸಂತೋಷ ಪಡ್ತಾರೆ ಅನ್ನೋ ಆನಂದವೇ ಅವಳಿಗೆ ನವಿರಾದ ಸುಖವನ್ನು ತಂದುಕೊಟ್ಟಿತು.

ಪಂಡಿತರ ಹೆಂಡತಿ ಸೀತಾಲಕ್ಷಮ್ಮನವರು ಒಂದು ದಿನ ಬಂದು ಕೊಳ್ಳೆಗಾಲದಲ್ಲಿ ಒಂದು ಮದುವೆ ಇದೆ. ನಮ್ಮ ಹುಡುಗಿ ವೆಂಕಟಲಕ್ಷ್ಮಿಗೂ ವರ ಹುಡುಕುತ್ತಿದ್ದೇವೆ. ಮದುವೆ ಮನೆಗೆ ಹುಡುಗೀನ ಸಾಧ್ಯವಾದರೆ ಕರ್ಕೊಂಡ್ ಬನ್ನಿ ಅಂದಿದ್ದಾರೆ. ಯಾವುದಾದರೂ ವರ ಇದ್ರೆ.. ಋಣಾನುಬಂಧ ಇದ್ದರೆ ಆದೀತೇನೋ ಅನ್ನೋ ಆಸೆ ಅಂತ ಪೀಠಿಕೆ ಹಾಕಿದರು. ಅಯ್ಯೋ

-★★★--★★★--★★★--★★★--★★★--★★★--★★★--★★★--★★★--★★★-

**ಆಕಾಶವಾಣಿಯ ಮೂಲಕ ಮೊದಲು ಮಾತಾಡಿದ ಕನ್ನಡಿಗ**

**- ಕುವೆಂಪು**

ಅದಿಕ್ಕೇನಂತೆ ಹೋಗ್ಬನ್ನಿ ಸೀತಾಲಕ್ಷ್ಮಿಯವರೇ, ಒಳ್ಳೆಯದಾಗಲಿ ಎಂದರು. ಆದರೂ ಸೀತಾಲಕ್ಷ್ಮಮ್ಮನವರು ಪಾಪ, ಸಂಕೋಚದಿಂದಲೇ ರಂಗವ್ವನ ಮುಖ ನೋಡುತ್ತಾ ಹೇಗೆ ಕೇಳುವುದೆಂದು ಯೋಚಿಸತೊಡಗಿದರು. ರಂಗವ್ವನಿಗೂ ಅರ್ಥವಾಗದೇ ಏನ್ಬೇಕ್ಹೇಳಿ ದುಡ್ಡು ಕಾಸು ಎಂದರು. ಅಯ್ಯೋ ಅದಲ್ಲ, ನಿಮ್ಮ ರೇ..ಷ್ಮೆ.ಸೀ..ರೆ ಎಂದರು ಜೀವ ಹಿಡಿಮಾಡಿಕೊಂಡು.

ಅಯ್ಯೋ ನನ್ನ ಜೀವವೇ, ಅದಕ್ಕೆ ಇಷ್ಟು ಸಂಕೋಚ ಪಟ್ಕೊ ಬೇಕಾ ಹೇಳಿ. ಪಾಪ ಮಗೂಗೆ ಗಂಡು ಗೊತ್ತಾದ್ರೆ ನಂಗೂ ಸಂತೋಷಾನೇ ಎಂದು ಬ್ಯಾಗಿನಲ್ಲಿ ಹಾಕಿಕೊಂಡು ಬಂದು ಕೊಟ್ಟರು.

ವೆಂಕಟಲಕ್ಷ್ಮಿಯ ಅದೃಷ್ಟವೋ ಋಣಾನುಬಂಧವೋ ಹುಡುಗನ ಅದೃಷ್ಟವೋ ಅಂತೂ ಮದುವೆ ನಿಷ್ಕರ್ಷೆಯಾದದ್ದೆ ರಂಗವ್ವನ ಸೀರೆಗೆ ಎಲ್ಲಿಲ್ಲದ ಮದಿಪು ಬಂದುಬಿಡ್ತು. ರಂಗವ್ವನ ರೇಷ್ಮೆ ಸೀರೆ ಉಟ್ರೆ ಒಳ್ಳೆಯದಾಗುತ್ತೆ ಎಂಬ ಸುದ್ದಿ ಇಡೀ ಹಳ್ಳಿಗೆ ಹಬ್ಬಿಕೊಂಡಿತು.

ಮೈ ನೆರೆದಾಗ, ಸೀಮಂತಕ್ಕೆ, ಮದುವೆಗೆ, ಮುಂಜಿಗೆ, ಹೀಗೆ ಎಲ್ಲ ಕಾರ್ಯಕ್ರಮಗಳಿಗೂ ಯಾರಾದರೊಬ್ಬರು ಬಂದು ರಂಗವ್ವನ ರೇಷ್ಮೆ ಸೀರೆ ಪಡೆದೆಯ ಸಮಾರಂಭಗಳಲ್ಲಿ ವಿಜೃಂಭಿಸತೊಡಗಿದರು. ರಂಗವ್ವನ ಮನಸ್ಸು ಅಷ್ಟೇ ದೊಡ್ಡದಾಗಿತ್ತು. ಒಂದು ರೀತಿಯಲ್ಲಿ ಮುಂಗಡ ಕಾಯ್ದಿರಿಸಬೇಕಾದ ಪರಿಸ್ಥಿತಿ ಬಂದಿತೆಂದರೆ ಎಷ್ಟು ಡಿಮ್ಯಾಂಡಿತ್ತು ನೀವೇ ಯೋಚಿಸಿ. ಬೇಸರ ಪಡದ ರಂಗವ್ವ ಯಾರು ಕೇಳಿದರೂ ಅವರಿಗೆ ಸೀರೆ ಕೊಟ್ಟು ಉಟ್ಟು ನಲಿಯುವುದನ್ನು ಕಂಡು ಸಂತಸ ಪಡತೊಡಗಿದರು.

ಸುತ್ತಲ ಮೈಸೂರು, ಚಾಮರಾಜನಗರ, ಕೊಳ್ಳೆಗಾಲ ತಾಲ್ಲೂಕಿನಲ್ಲಿ ಎಲ್ಲಿ ಮದುವೆಯಾದರೂ ರಂಗವ್ವನ ರೇಷ್ಮೆ ಸೀರೆ ಕಂಗೊಳಿಸುತ್ತಿತ್ತು. ಯಾರು ಉಟ್ಟು ಕೊಂಚ ಕೊಳೆ ಮಾಡಿಕೊಟ್ಟರೂ ಬೇಸರಿಸದೆ ಸ್ವಂತ ಖರ್ಚಿನಲ್ಲಿ ಮೈಸೂರಿಗೆ ಕಳುಹಿಸಿ ಡ್ರೈ ವಾಷ್ ಮಾಡಿಸಿ ತರಿಸುತ್ತಿದ್ದರು.

ಕೊಳ್ಳೆಗಾಲದ ಸಾಹುಕಾರ ಸುಬ್ಬಣ್ಣನವರ ಮಗಳ ಮದುವೆ ನಿಷ್ಕರ್ಷೆಯಾಗಿ ಸುತ್ತಮುತ್ತಲ ನಲವತ್ತು ಹಳ್ಳಿಗೂ ಕರೆಯೋಲೆ ಕಳುಹಿಸಿದರು. ಆಗ ರಂಗವ್ವನಿಗೆ ಕರೆ ಹೋಗದಿದ್ದೀತೇ? ಸುಬ್ಬಣ್ಣನವರ ಮಗಳ ಮದುವೆಗೆ ರಂಗವ್ವನ ರೇಷ್ಮೆ ಸೀರೆ ಉಟ್ಟು ಹೋಗಬೇಕು ಎಂದು ಆಶಿಸಿದ್ದವರಿಗೆಲ್ಲ ಕೊಂಚ ನಿರಾಸೆಯೇ ಆಯಿತು. ಏಕೆಂದರೆ ರಂಗವ್ವನೇ ಮದುವೆಗೆ ಹೊರಟಿದ್ದರಲ್ಲ.

ಮದುವೆಯ ದಿನವೂ ಬಂತು. ರಂಗವ್ವ ಎಷ್ಟೋ ದಿವಸದ ಮೇಲೆ ತನ್ನ ರೇಷ್ಮೆ ಸೀರೆಯನ್ನು ತಾನೇ ಉಟ್ಟು ಹೊರಟ ಆನಂದಕ್ಕಿಂತ ಅಯ್ಯೋ ಬೇರೆ ಯಾರಾದರೊಬ್ಬರು ಉಟ್ಟು ಮದುವೆಗೆ ಹೋಗಿದ್ದರೆ ಇನ್ನೂ ಸಂತೋಷವಾಗುತ್ತಿತ್ತಲ್ಲ ಎಂಬ ದೊಡ್ಡ ಗುಣದಿಂದಲೇ

-★★★--★★★--★★★--★★★--★★★--★★★--★★★--★★★--★★★--★★★-

**ಕನ್ನಡದ ಮೊದಲ ಮೊಹಮ್ಮದೀಯ ಕವಿ - ಶಿಶುನಾಳ ಷರೀಫ**

ಯೋಚಿಸಿದರು. ಎಷ್ಟೋ ಜನ ಉಟ್ಟು ಸಂತಸ ಪಟ್ಟಿದ್ದರೂ ಒಂಚೂರೂ ಮಾಸದ ನವಿಲ ಬಣ್ಣದ ಸೀರೆ ಎಲ್ಲರ ಕಣ್ಣು ಸೆಳೆದಿತ್ತು. ಜೊತೆಗೆ ರಂಗವ್ವನ ಆಕರ್ಷಕ ರೂಪದಿಂದ ಸೀರೆಗೂ ಮೆರಗು ಬಂದಿತ್ತು.

ಧಾರಾ ಮುಹೂರ್ತ ನಡೆಯುತ್ತಿದೆ. ರಂಗವ್ವ ಕೂಡಾ ನೋಡಿ ಆನಂದಿಸುತ್ತಿದ್ದಾಗ ಹಿಂದುಗಡೆ ಸಾಲಿನಲ್ಲಿ ಕುಳಿತ ಹುಡುಗಿಯೊಬ್ಬಳು ''ನೋಡೇ ಮುಂದೆ ಕೂತಿರೋ ಹೆಂಗಸಿನ ಧಿಮಾಕನ್ನ! ರಂಗವ್ವನ ರೇಷ್ಮೆ ಸೀರೆ ಉಟ್ಟು ತನ್ನದೇ ರೇಷ್ಮೆ ಸೀರೆ ಅನ್ನೋ ಹಾಗೆ ಜಂಭದಿಂದ ಕೂತಿದೆ'' ಎಂದದ್ದು ರಂಗವ್ವನ ಕಿವಿಗೂ ಬಿತ್ತು. ಇಷ್ಟು ದಿವಸ ಸೀರೆಯನ್ನು ಬೇರೆಯವರಿಗೆ ಕೊಟ್ಟಿ ಅವರು ಉಟ್ಟು ಸಂತೋಷ ಪಡುತ್ತಾರೆ ಎಂಬ ಭ್ರಮೆಯಲ್ಲಿದ್ದ ರಂಗವ್ವನಿಗೆ ವಾಸ್ತವಕ್ಕೆ ಎತ್ತಿ ತಂದು ಕುಕ್ಕಿದಂತಾಯ್ತು. ಉದಾರ ಮನಸ್ಸಿನಿಂದ ತಾನು ಕೊಟ್ಟಿದ್ದರೂ ಉಟ್ಟವರು ಪಾಪ ಎಂಥಾ ಮಾತು ಕೇಳುತ್ತಿದ್ದರೋ? ಉಟ್ಟವರ ಬೆನ್ನ ಹಿಂದೆಯೂ ''ರಂಗವ್ವನ ಸೀರೆ ಉಟ್ಟು ಬಂದಿದ್ದಾಳೇ, ರಂಗವ್ವನ ಸೀರೆ ಉಟ್ಟು ಬಂದಿದ್ದಾಳೆ'' ಎಂದು ಆಡಿಕೊಂಡು ನಕ್ಕಿರುವುದು ಉಟ್ಟವರಿಗೆ ಕೇಳಿಸಿ ಅವರ ಮನಸ್ಸಿಗೆ ಎಷ್ಟು ಬೇಸರವಾಗಿರಬೇಡ ಎನ್ನಿಸಿತು. ಉಟ್ಟವರ ಸಂತೋಷವೇ ನನ್ನ ಸಂತೋಷವೆನಿಸಿದ್ದು ಅವರಿಗೆಷ್ಟು ಮುಳ್ಳಾಗಿರಬೇಡ? ಮದುವೆಯ ಊಟ ರುಚಿಸದಾಯಿತು.

ಮದುವೆಯ ಮನೆಯಿಂದ ಊರಿಗೆ ಬಂದ ತಕ್ಷಣ ರಂಗವ್ವ ಮಾಡಿದ ಮೊದಲ ಕೆಲಸವೆಂದರೆ ಟೈಲರ್ ಸಿದ್ದಪ್ಪಾಜಿಯನ್ನು ಕರೆಸಿದ್ದು. ನೋಡು ಸಿದ್ದಪ್ಪ, ಮುಂದಿನ ಸೋಮವಾರ ಉಗಾದಿ ಹಬ್ಬ, ಅಷ್ಟರೊಳಗೆ ರೆಡಿಯಾಗಬೇಕು ಅಂತ ತಾಕೀತು ಮಾಡಿ ಕಳಿಸಿದರು.

ಎಣ್ಣೆ ನೀರು ಹಾಕಿಕೊಂಡು ಬಂದ ಹತ್ತು ಹನ್ನೆರಡರ ಮೊಮ್ಮಕ್ಕಳಿಬ್ಬರೂ ರೇಷ್ಮೆ ಲಂಗ ಜಂಪರ್‌ನಲ್ಲಿ ಖುಷಿ ಪಡುತ್ತಿದ್ದುದನ್ನು ನೋಡಿದ ರಂಗವ್ವನಿಗೆ ಮನಸ್ಸಿಗೆ ಸಂತೋಷವಾಯಿತು.

❋

---

## ಒಂದು ಉಚಿತ

“ನೀವು ಮದ್ಯ ವ್ಯಸನಿಗಳೆ? ಈಗಲೇ ಕರೆ ಮಾಡಿ ನಾವು ನಿಮಗೆ ಸಹಾಯ ಮಾಡುತ್ತೇವೆ” ಎಂಬ ಸಂದೇಶ ಹೊತ್ತಿದ್ದ ಕರಪತ್ರ ಅಂದಿನ ನ್ಯೂಸ್ ಪೇಪರ್ ಜತೆ ಬಂದಿತು.

ಕರೆ ಮಾಡಿದರು ಒಬ್ಬರು.

ಅದೊಂದು ಮದ್ಯದ ಅಂಗಡಿಯ ಕೊಡುಗೆ: “ಮೂರು ಕೊಂಡರೆ ಒಂದು ಉಚಿತ.”

-★★★--★★★--★★★--★★★--★★★--★★★--★★★--★★★--★★★--★★★-

**ಕದಂಬರ ಬಂಗಾರದ ನಾಣ್ಯಗಳ ಹೆಸರು - ಪದ್ಮ ಟಂಕ**

# ಅಕ್ಟೋಬರ್ ಆಘಾತ

**– ಸಿ.ಆರ್. ಸತ್ಯ**

**ಈ** ವರ್ಷದ ಅಕ್ಟೋಬರ್ 11ನೇ ದಿನಾಂಕವನ್ನು ಮರೆಯಲು ಖಂಡಿತಾ ಸಾಧ್ಯವಿಲ್ಲ. ದೇಶಕ್ಕೆ ಅಂದು ಆದ ಆಘಾತದ ಪರಿಣಾಮದ ವ್ಯಾಪ್ತಿ ಹಿಂದೆಂದೂ ನಾವು ಚರಿತ್ರೆಯಲ್ಲೇ ಓದಿರಲಿಲ್ಲ. ಎಲ್ಲಾ ಶುರುವಾದದ್ದು ಬೆಳಿಗ್ಗೆ ಪೇಪರ್ ಹಾಕೋ ಹುಡುಗನಿಂದಲೇ! ಮಳೇ ಇಲ್ಲದಿದ್ದರೂ ಯಾಕೋ ಪೇಪರ್ ಒದ್ದೆಯಾಗಿತ್ತು. ನೋಡಿದ್ರೆ, ಅವನ ಕಣ್ಣಲ್ಲಿ ಧಾರಾಕಾರವಾಗಿ ನೀರು ಸುರಿಯುತ್ತಿತ್ತು. ''ಏನಪ್ಪಾ, ಬೆಳಗಾಗೆದ್ದು ಏನಾದರೂ ಈರುಳ್ಳಿ ಕತ್ತರಿಸಿದೆಯಾ?'' ಅಂತ ಕೇಳಿದೆ. ''ನಮ್ಮಂತಹವರಿಗೆ ಈಗ ಯಾವ ಈರುಳ್ಳಿ ದಕ್ಕುತ್ತೆ ಸಾರ್? ಅದು... ಅದು... ಸಚಿನ್'' ಅಂತ ಬಿಕ್ಕಿ ಬಿಕ್ಕಿ ಅಳೋಕ್ಕೆ ಶುರು ಮಾಡಿದ.

> **''ಅಲ್ಲ, ನನಗೆ ಒಂದೂ ಅರ್ಥವೇ ಆಗುತ್ತಿಲ್ಲ. ಯಾರು ಈ ಸಚಿನ್ನು?''**

''ನನಗೆ ಹೇಳೋಕ್ಕೆ ಆಗ್ತಿಲ್ಲಾ ಸಾರ್. ನೀವೇ ಪೇಪರ್‌ನಲ್ಲಿ ಓದಿ'' ಅಂತ ಅಂತ್ಕೊಂಡು ಹೊರಟು ಹೋದ. ಅಷ್ಟರಲ್ಲೇ ನಮ್ಮ ಪಕ್ಕದ ಮನೆಯ ಶಾಲಿನಿ ಓಡಿ ಬಂದು, ''ಅಂಕಲ್, ಗೋಪಾಲ್ಗೆ ಯಾಕೋ ಹುಶಾರು ತಪ್ಪಿದೆ. ಪ್ಲೀಸ್ ಬಂದು ನೋಡಿ'' ಅಂತ ಗಾಬರಿಪಡಿಸಿದಳು. ಗೋಪಾಲ್ ಶಾಲಿನಿಯ ಐಟಿ ಬಿಟಿ ಗಂಡ. ನಾನು ಅವರ ಮನೆಗೆ ಓಡಿದೆ. ಗೋಪಾಲ್ ಸೋಫಾ ಮೇಲೆ ಒರಗಿದ್ದ. ಎಡಗಡೆ ಎರಡು ಮೊಬೈಲ್‌ಗಳು, ಕಾಲ ಹತ್ತಿರ ಒಂದು ಐಪ್ಯಾಡು, ಬಾಯಿ ಹತ್ತಿರ ಒಂದು ಐ ಫೋಡ್, ಹೊಟ್ಟೆ ಮೇಲೆ ಅರ್ಧ ತೆಗೆದಿದ್ದ ಲ್ಯಾಪ್ ಟಾಪ್ ಕಂಡವು. ಕಣ್ಣುಗಳನ್ನು ಮೇಲಕ್ಕೆ ತೇಲಿಸಿದ್ದ. ಇಷ್ಟೊಂದು ಗ್ಯಾಡ್ಜೆಟ್ಸ್ಗಳ ಮಧ್ಯದಲ್ಲಿದ್ದ ಅವನಿಗೆ ಎಲ್ಲೋ ಎಲೆಕ್ಟ್ರಿಕ್ ಶಾಕ್ ತಟ್ಟಿರಬೇಕು ಅಂತ ಮೈನ್ ಸ್ವಿಚ್ ಆಫ್ ಮಾಡ್ದೆ. ಅವನ ದೇಹ ಇನ್ನೂ ಒರಗಿಕೊಂಡಿತು. ಕೊನೆಗೂ ಕಣ್ಣು ತೆರೆದ. ''ಏನಾಯ್ತು ಗೋಪಾಲ್?'' ಅಂತ ವಿಚಾರಿಸಿದೆ.

''ಓ! ಏನಿಲ್ಲಾ ಅಂಕಲ್, ಸಚಿನ್.... ಸಚಿನ್... ಓ ಗಾಡ್!!'' ಅಂತ ಇನ್ನೊಂದು ಸಲ ಲೈಟ್ ಆಗಿ ಜ್ಞಾನ ತಪ್ಪಿಸಿಕೊಂಡ.

ಈ ಮಧ್ಯೆ ನನ್ನ ಹೆಂಡತಿ ಕೂಗು ಹಾಕಿ, ''ರೀ, ಬೇಗ ಬನ್ನಿ, ಶೇಷು ಫೋನ್‌ನಲ್ಲಿದ್ದಾನೆ. ಮಾವ ಜ್ಞಾನ ತಪ್ಪಿ ಬಿದ್ದುಟ್ರಂತೆ!'' ಅಂತ ಕರೆದಳು. ಶೇಷು ನನ್ನ ಸೋದರ ಮಾವನ ಮಗ. ''ಏನಾಯ್ತೂ...?'' ಅಂತ ಕೇಳಿದೆ. ''ಭಾವ, ಡ್ಯಾಡಿ ಬೆಳಿಗ್ಗೆ ಪೇಪರ್ ಓದ್ತಾ, ಅಯ್ಯೋ ಇನ್ನೇನು ಗತಿ? ಅಂತ ಕೂಗಿಕೊಂಡರು. ನಾನು ನೋಡೋ ಹೊತ್ತಿಗೆ ಜ್ಞಾನ ಇರಲಿಲ್ಲ.

-★★★--★★★--★★★--★★★--★★★--★★★--★★★--★★★--★★★--★★★-

**ಕನ್ನಡದ ಮೊದಲ ಸಣ್ಣಕಥೆ – ಪಂಜೆ ಮಂಗೇಶರಾಯರ**
**– ಚಿಕ್ಕ ತಾಯಿ**

ಆದರೂ ರನ್ ರೇಟು, ಟೆಸ್ಟ್ ಕ್ರಿಕೆಟ್ಟು, ಶೋಲ್ಡರ್ ಇಂಜ್ಯುರಿ ಅಂತ ಏನೇನೋ ಗೊಣಗ್ತಾ ಇದ್ದರು. ಆಮೇಲೆ ನಾನು ಇನ್ನು ಬದುಕಿ ಏನು ಪ್ರಯೋಜನ? ಅಂತ ಕೇಳೋಕ್ಕೆ ಶುರು ಮಾಡಿದ್ರು. ಅಮ್ಮ ಬಂದು, ಸುಮ್ಮನೆ ತೆಪ್ಪಗೆ ಕೂತ್ಕೊಳ್ಳಿ, ಬಾಯಿಗೆ ಬಂದ ಹಾಗೆ ಮಾತಾಡ್ಬೇಡಿ ಅಂತ ಗದರಿಕೊಂಡ ಮೇಲೆ, ಈಗ ಸುಮ್ಮನೆ ಆಕಾಶ ನೋಡ್ತಾ ಕೂತಿದ್ದಾರೆ'' ಅಂದ.

''ಹಾಗಾದ್ರೆ, ಇದು ಹಾರ್ಟ್ ಪ್ರಾಬ್ಲಮ್ ಅಂತೂ ಅಲ್ಲ ಬಿಡು. ಆಮೇಲೆ ಅವರನ್ನು ಬಂದು ನೋಡ್ತೀನಿ'' ಅಂತ ಫೋನ್ ಕೆಳಗಿಟ್ಟೆ.

ಈ ಸಮಯಕ್ಕೆ, ನಮ್ಮ ಮನೆ ಕಾಲಿಂಗ್ ಬೆಲ್ ಟ್ರಿಂಗ್!! ಅಂತು. ಬಾಗಿಲಲ್ಲಿ ನನ್ನ ಸ್ನೇಹಿತ ಗೋವಿಂದಯ್ಯ ನಿಂತಿದ್ದ. ಗೋವಿಂದಯ್ಯ ನಮ್ಮ ರೋಡಿನಲ್ಲೇ ಇರೋ ಒಂದು ಸೆಂಟ್ರಲ್ ಗೌರ್ನಮೆಂಟ್ ಆಫೀಸ್‌ನಲ್ಲಿ ಕೆಲಸ ಮಾಡ್ತಿದ್ದ. ಅಲ್ಲಿಯ ಯೂನಿಯನ್ ಲೀಡರ್ರೂ ಆಗಿದ್ದ. ''ಇವತ್ತು, ಎಂಥಹ ಸುದ್ದಿ ಬಂದಿದೆಯಯ್ಯಾ? ನಾವೆಲ್ಲಾ ಈಗ ಯೂನಿಯನ್ ಮೀಟಿಂಗ್ ಮಾಡಿ, ದೇಶಾದ್ಯಂತ ಎಲ್ಲಾ ಕೇಂದ್ರ ಸರ್ಕಾರದ ಆಫೀಸ್‌ಗಳಿಗೆಲ್ಲ ಒಂದು ವಾರ ರಜ ಘೋಷಿಸೋಕ್ಕೆ ಡಿಮ್ಯಾಂಡ್ ಮಾಡೋಕ್ಕೆ ಹೊರಟಿದ್ದೀವಿ'' ಅಂದ. ''ಅಲ್ಲಪ್ಪ, ಈ ದಸರಾ ಹಬ್ಬದ ರಜಗಳು ಸೇರಿ ನೀವೆಲ್ಲಾ ಆಗಲೇ ಎರಡು ತಿಂಗಳುಗಳಿಂದ ರಜಗಳಲ್ಲೇ ಇದೀರಾ? ಇನ್ಯಾತಕ್ಕೆ, ಎಕ್ಸ್ಟ್ರಾ ರಜ?'' ಅಂತ ಕೇಳಿದೆ.

''ಸಚಿನ್ ವಿಷಯಕ್ಕೆ ರಜ ಕೊಡಲಿಲ್ಲ ಅಂದರೆ ಯುಪಿಎ ಸರ್ಕಾರಕ್ಕೆ ನಾಚಿಕೆ ಇಲ್ಲಾ ಅಂತಲೇ ಅರ್ಥ. ಅಮೇರಿಕಾ ಸರ್ಕಾರವೇ ಬಾಗಿಲು ಮುಚ್ಚಿಕೊಂಡು ತೆಪ್ಪಗೆ ಕೂತಿರೋವಾಗ ನಮ್ಮ ಸರ್ಕಾರಕ್ಕೇನು ಧಾಡಿ? ನಾನು ಬರ್ತೀನಿ, ಹೊತ್ತಾಯ್ತು'' ಅಂತ ಓಡಿದ.

ನನ್ನ ಗಮನ ನಮ್ಮ ಮನೆ ಟೀವಿ ಕಡೆ ಹರಿಯಿತು. ಚ್ಯಾನಲ್ನಲ್ಲಿ ಒಬ್ಬ ಬೆಡಗಿ ಯಾರೋ ಸ್ವಾಮೀಜಿಯನ್ನು ಮುಂದೆ ಕೂರಿಸಿಕೊಂಡು ''ಸ್ವಾಮೀಜಿ, ಈ ಸಚಿನ್ ಎಪಿಸೋಡ್‌ನಿಂದ ನಮ್ಮ ಸಮಾಜದ ಯುವಕ ಯುವತಿಯರ ಭವಿಷ್ಯಕ್ಕೆ ಏನಾದರು ಧಕ್ಕೆ ಬರಬಹುದೆ?'' ಅಂತ ಕೇಳುತ್ತಿದ್ದಳು.

ಸ್ವಾಮೀಜಿ, ''ನೋಡಿ, ಜೀವನವೇ ಒಂದು ಮಾಯೆ. ಇವತ್ತು ಕೈನಲ್ಲಿ ಬ್ಯಾಟ್ ಹಿಡ್ಕೊಂಡಿರೋರೂ ನಾಳೆ ಬಾಲ್ ಹಿಡ್ಕೋಬಹುದು, ನಾಡಿದ್ದು ವಾಕರ್ ಹಿಡ್ಕೋಬಹುದು, ಆಚೆ ನಾಡಿದ್ದು ವೀಲ್ ಚೇರೂ ಹಿಡ್ಕೋಬಹುದು. ಎಲ್ಲವೂ ಕ್ಷಣಿಕ ಅನ್ನೋದನ್ನು ನಾವು ಮರಿಯಬಾರದು'' ಅಂತ ಉತ್ತರಿಸಿದರು. ಅಷ್ಟರಲ್ಲಿ ಬೆಡಗಿ, ''ಒಂದು ನಿಮಿಷ ಸ್ವಾಮೀಜಿ.... ಹಲೋ!! ಯಾರು ಕರೆ ಮಾಡ್ತಿರೋದೂ...? ನಿಮ್ಮ ಹೆಸರೂ?'' ಅಂತ ಕೇಳಿದಳು. ''ನಾನು ಮನೋಜ್ ಅಂತ. ಕತ್ತರಿಗುಪ್ಪೆ ಇಂದ ಮಾತಾಡ್ತಾ ಇದೀನಿ'' ಅಂತ

-★★★--★★★--★★★--★★★--★★★--★★★--★★★--★★★--★★★--★★★-

**ಕನ್ನಡದ ಮೊದಲ ಕವಿಯಿತ್ರಿ - ಅಕ್ಕಮಹಾದೇವಿ**

ದೂರವಾಣೀಲಿ ಉತ್ತರ ಕೇಳಿ ಬಂತು. ''ಇದು ಸ್ವಾಮೀಜಿ ಅವರಿಗೆ ಕೇಳಬೇಕಾದ್ದು. ಇಲ್ಲಿಯ ತನಕ ಸಚಿನ್ ಕೋಕೋ ಕೋಲಾ ಕುಡೀತಾರೆ ಅಂತ ನಾನೂ ದಿನಕ್ಕೆ ಎರಡೆರಡು ಬಾಟಲ್ ಕೋಕ್ ಕುಡೀತಾ ಇದ್ದೆ. ಇನ್ನು ಮುಂದೆ ಏನು ಮಾಡಲೀ ಸ್ವಾಮೀಜೀ?''

ಸ್ವಾಮೀಜಿ ಕ್ಷಣಿಕವಾಗಿ ಗಾಬರಿಯಾದರು. ಪಾಪ, ಅವರಿಗೆ ಬಾಟಲ್ಗಳ ವಿಷಯಗಳು ತಾನೇ ಹೇಗೆ ತಿಳೀಬೇಕೂ? ''ಹಾಗಾದರೆ, ಬೇರೆ ಯಾವುದಾದರೂ ಬಾಟಲ್‌ಗಳಿಗೆ ಶರಣರಾಗಿ ಅಷ್ಟೆ. ಮಿನರಲ್ ವಾಟರ್ ಬಾಟಲ್ ಆದರೆ ಉತ್ತಮ!'' ಅಂತ ನಿಭಾಯಿಸಿಕೊಂಡರು.

ಬೇರೆ ಯಾವುದೋ ದೆಹಲಿ ಚಾನಲ್‌ಗೆ ಬದಲಾಯಿಸಿದೆ. ಆಗ ತಾನೇ ಕಾಂಗ್ರೆಸ್ ಹೈ ಕಮಾಂಡ್ ಪಿ.ಎಮ್. ಮನೆಯಲ್ಲಿ ತುರ್ತು ಸಭೆಯನ್ನು ಮುಗಿಸಿತ್ತು. ಮಾಧ್ಯಮದ ಪ್ರತಿನಿಧಿ ಅಂತ ತೋರುತ್ತಿದ್ದ ಸರ್ದಾರ್ಜಿ ಒಬ್ಬ ''ಸಚಿನ್ ಬಗ್ಗೆ ಕಾಂಗ್ರೆಸ್ ಸರ್ಕಾರ ಇನ್ನು ಕೆಲವೇ ಕ್ಷಣಗಳಲ್ಲಿ ತನ್ನ ಅನಿಸಿಕೆಗಳನ್ನು ತಿಳಿಸುತ್ತೆ. ಖುದ್ದಾಗಿ ಮನಮೋಹನ್ ಸಿಂಗ್ ಅವರೇ ಮಾತಾಡೋ ಸಂಭವವೂ ಇದೆ. ಎಷ್ಟು ಪದಗಳು ಮಾತನಾಡಬೇಕು ಅನ್ನೋದನ್ನ ಸೋನಿಯಾ ಅವರು ನಿರ್ಧರಿಸ್ತಾರೆ'' ಅಂತ ಮುನ್ಸೂಚನೆ ಕೊಟ್ಟ. ಪತ್ರಕರ್ತರೆಲ್ಲ ನೂರಕ್ಕೂ ಹೆಚ್ಚು ಮೈಕ್ರೋಫೋನ್‌ಗಳನ್ನು ಹಿಡ್ಕೊಂಡು ಕಾಯ್ತಿದ್ರು. ಆದರೆ ಬಂದವರು ಒಬ್ಬ ವಕ್ತಾರರು ಅಷ್ಟೆ.

''ಪ್ರಧಾನಿ ಅವರು, ಸೋನಿಯ ಗಾಂಧಿ, ರಾಹುಲ್ ಗಾಂಧಿ ಮತ್ತಿತ್ತರೇ ಗಣ್ಯರು ಸಚಿನ್ ಬಗ್ಗೆ ಬೆಳಗ್ಗಿನಿಂದಲೇ ಚಿಂತನೆ ಮಾಡುತ್ತಿದ್ದು ಬಹಳ ದಣಿದಿದ್ದಾರೆ. ಈ ಸಂಜೆಯ ಮುಂಚೆ ಸಚಿನ್‌ಗೆ ಭಾರತ ರತ್ನ ಅಥವಾ ಭಾರತ ವಜ್ರ ಅಥವಾ ಭಾರತ ವೈಢೂರ್ಯ ಕೊಡುವುದರ ಬಗ್ಗೆ ನಿರ್ಧಾರ ಮಾಡಲಾಗುತ್ತದೆ. ಅಲ್ಲಿಯವರೆಗೂ, ದೇಶದ ಜನಸ್ತೋಮ ಶಾಂತ ರೀತಿಯಲ್ಲಿ ವರ್ತಿಸಬೇಕೆಂದು ಪ್ರಧಾನಿ ಅವರು ಸಂದೇಶ ನೀಡಿದ್ದಾರೆ'' ಎಂದು ತಿಳಿಸಿದರು.

ಅಷ್ಟರಲ್ಲೇ ನಮ್ಮ ಮನೆಯ ಪಕ್ಕದಲ್ಲೇ ಇರುವ ಸ್ಕೂಲ್ ಗ್ರೌಂಡ್ಸ್ನಲ್ಲಿ ಒಂದು ನೂರರಷ್ಟು ಹುಡುಗರು ಜಮಾಯಿಸಿ, ಆಗ ತಾನೇ ಕ್ರಿಕೆಟ್ ಮ್ಯಾಚ್ಗೆ ಇಳಿದಿದ್ದರು. ಅಲ್ಲೇ ನಿಂತಿದ್ದ ಒಬ್ಬ ಹುಡುಗನನ್ನು ಕರೆದು ''ಇವು ಯಾವ ಟೀಮ್‌ಗಳಪ್ಪ?'' ಅಂತ ಕೇಳಿದೆ. ಅವನು ''ಒಂದು ಸಚಿನ್ ಮಾಡಿದ್ದು ಸರಿ ಟೀಮು, ಇನ್ನೊಂದು ಸಚಿನ್ ಮಾಡಿದ್ದು ತಪ್ಪು ಟೀಮ್. ಇದು ಟ್ವೆಂಟಿ ಓವರ್ ಮ್ಯಾಚ್ ಅಂಕಲ್'' ಅಂತ ಓಡಿದ. ಆಗಲೇ ಬ್ಯಾಟ್ಸ್ ಮ್ಯಾನ್ ಕಡೆಯಿಂದ ಟಪ್! ಅಂತ ಶಬ್ಧ ಬಂತು. ಅರ್ಧ ಸೆಕೆಂಡ್ ಆದ ಮೇಲೆ ಏನೋ ಕ್ಷಿಪಣಿ ಹಾಗೆ ಹಾರಿಕೊಂಡು ಬಂದು ನಮ್ಮ ಮನೆ ಮುಂದೆ ಪಾರ್ಕ್ ಮಾಡಿದ್ದ ನನ್ನ 1958 ಮಾಡೆಲ್ ಫಿಯಟ್ ಕಾರ್ ವಿಂಡ್ ಶೀಲ್ಡ್‌ಗೆ ಅಪ್ಪಳಿಸಿ, ಗಾಜೇ ಮಾಯವಾಯಿತು. ಎಲ್ಲರೂ ''ಸಚಿನ್ ಶಾಟ್! ಸಚಿನ್

-★★★--★★★--★★★--★★★--★★★--★★★--★★★--★★★--★★★--★★★-



**ರಾಜಾಜ್ಞೆಗಳನ್ನು ಕನ್ನಡದಲ್ಲಿ ಬರೆಸಿದ ಮೊದಲ ಅರಸರು**
**- ಚಾಲುಕ್ಯರು**



ಶಾಟ್! ಒನ್ಸ್ ಮೋರ್!!'' ಅಂತ ಕೇಕೆ ಹಾಕಿದ್ರು. ಆಗ ಬೌಲರ್ಗೆ ಸಿಕ್ಕಾಪಟ್ಟೆ ಕೋಪ ಬಂತು ಅಂತ ಕಾಣುತ್ತೆ. ನೆಕ್ಸ್ಟ್ ಬಾಲ್‌ನ ಬ್ಯಾಟ್ಸ್‌ಮ್ಯಾನ್ ಕಡೆ ಎಸಿಯೋ ಬದಲು ನನ್ನ ಕಾರಿನ ಹೆಡ್ ಲೈಟ್ಸ್‌ನೇ ವಿಕೆಟ್ ಅಂತ ಅಂದ್ಕೊಂಡು ರೋಷದಿಂದ ಬಾಲ್ ಎಸೆದ. ಹೆಡ್ ಲೈಟೂ ಒಂದು ಕ್ಷಣದಲ್ಲಿ ಮಾಯವಾಯ್ತು ಈವಾಗ ಈ ಪಾರ್ಟ್‌ಗಳು ಸ್ಪೇರ್ಸ್ ಆಗಿ ಸಿಗಲ್ಲವಂತೆ. ಈ ಮಧ್ಯೆ ನಮ್ಮ ಕನ್ನಡ ಟೀವಿ ಚ್ಯಾನಲ್‌ನಲ್ಲಿ ಜೋರಾಗಿ ಯಾರೋ ರಾಜಕಾರಣಿಗಳು ''ಸಚಿನ್ ಹೀಗೇ ನಿರ್ಧಾರ ತೊಗೊಂಡಿರುವುದಕ್ಕೂ ನಮ್ಮ ಮುಖ್ಯ ಮಂತ್ರಿಗಳು ಚಾಮರಾಜನಗರಕ್ಕೆ ಭೇಟಿ ಕೊಟ್ಟಿದ್ದಕ್ಕೂ ಯಾವ ಸಂಬಂಧವೂ ಇಲ್ಲ!'' ಅಂತ ರೇಗುತ್ತಿದ್ದರು. ಇನ್ನೊಬ್ಬರು ''ಸಚಿನ್ ನಿರ್ಧಾರಕ್ಕೆ ನರೇಂದ್ರ ಮೋದಿ ಕಾರಣ ಅಂತ ಕಾಂಗ್ರೆಸ್ ಪಾಟಿ ಕುಹಕ ಸುದ್ದಿ ಹರಡುತ್ತಿದೆ. ಇದು ತೀರಾ ಅನ್ಯಾಯ!'' ಅಂತ ತಿರುಗೇಟು ಕೊಟ್ರು. ಆಗ ನ್ಯೂಸ್ ರೀಡರ್ ಮುಂಬಯಿ ಲೈವ್ ಚಿತ್ರವೊಂದನ್ನು ತೋರಿಸಿದಳು. ಚರ್ಚ್ ಗೇಟ್ ಮುಂದೆ ಸಾವಿರಾರು ಜನರು ಗಾಡ್ ಸೇವ್ ಅಸ್!! ಅಂತ ಬ್ಯಾನರ್‌ಗಳನ್ನು ಹಿಡ್ಕೊಂಡು ವಾಂಖೆಡೇ ಸ್ಟೇಡಿಯಂ ಕಡೆ ಸಾಲು ಸಾಲಾಗಿ ಹೋಗುತ್ತಿದ್ದರು. ''ಆಲ್ ಇಂಡಿಯಾ ಮಾರಾಟಗಾರರ ಸಂಘ – ಇನ್ನು ಮುಂದೆ ಸಚಿನ್ ಇಲ್ಲದಿದ್ದರೆ ಜಾಹೀರಾತುಗಳಲ್ಲಿ ಬೇರೆ ಯಾರನ್ನು ಉಪಯೋಗಿಸಲು ಸಾಧ್ಯ? ನಮ್ಮ ಗತಿ ಮುಗೀತು – ಅಂತ ಕೂಗಾಡ್ತಿದ್ದಾರೆ. ಇನ್ನು ಮುಂದೆ ಇವರೆಲ್ಲರ ವ್ಯಾಪಾರ ಹೇಗೆ ಕುಸಿಯುತ್ತೆ ಅಂತ ನೋಡಬೇಕಾಗಿದೆ'' ಅಂತ ಮುಂಬಯಿ ಪ್ರತಿನಿಧಿ ಹೇಳ್ತಾ ಇದ್ದ.

ಈ ಘಟ್ಟಕ್ಕೆ ಬರೊ ಹೊತ್ತಿಗೆ ನನಗೆ ಯಾಕೋ ತಲೆ ಸುತ್ತುವ ಹಾಗೆ ಆಯಿತು.

''ಅಲ್ಲವೆ, ನನಗೆ ಒಂದೂ ಅರ್ಥವೇ ಆಗುತ್ತಿಲ್ಲ. ಯಾರೇ ಈ ಸಚಿನ್ನು?'' ಅಂತ ನನ್ನ ಹೆಂಡತಿಯನ್ನು ಕೇಳಿದೆ.

ಅವಳಿಗೆ ನನಗಿಂತಲೂ ಜನರಲ್ ನಾಲೆಡ್ಜ್ ಜಾಸ್ತಿ.

''ಅದೇ ರೀ... ಸಚಿನ್ ತೆಂಡೂಲ್ಕರ್ ಅಂತಾರಲ್ಲ, ಅವನೇ! ಇಂಡಿಯಾದ ಫುಟ್‌ಬಾಲ್ ಟೀಮ್ ಕ್ಯಾಪ್ಟನ್ ಆಗಿದ್ದನಂತೆ. ಈಗ ಸ್ವ ಇಚ್ಛೆಯಿಂದ ರಿಟೈರ್ಡ್ ಆಗ್ತಾನಂತೆ. ಅದರಿಂದ ನಮಗೆ ಏನಾಗಬೇಕು ಬಿಡಿ. ಅಲ್ಲೇ ಮೂಲೇಲಿ ತೆಂಗಿನ ಪೊರಕೆ ಇಟ್ಟಿದ್ದೀನಿ. ತೊಗೊಂಡು ಕಾರ್ ಹತ್ತಿರ ಹೋಗಿ, ಅಲ್ಲಿ ಬಿದ್ದಿರೋ ಗಾಜಿನ ತುಂಡುಗಳನ್ನೆಲ್ಲಾ ಯಾರಿಗೂ ಚುಚ್ಚುಕೊಳ್ಳದ ಹಾಗೆ ಮೂಲೇಗೇ ತಳ್ಳಿ. ಹಾಗೇ, ಗೇಟ್ ಹತ್ತಿರಾನೂ ಗುಡಿಸಿ ನೀರು ಹಾಕಿ ಬನ್ನಿ. ಯಾಕೋ ಕೆಲಸದವಳು ಇವತ್ತು ಬರೋದು ಅನುಮಾನವೇ! ಅವಳಿಗೂ ಸಚಿನ್ ವಿಷಯ ಕೇಳಿ ಲಕ್ವ ಬಡಿದಿಯ್ಯೋ ಏನೋ ಬೇಗ ಗುಡಿಸಿ ಬನ್ನಿ, ಕಾಫೀ ಬೆರೆಸ್ತೀನಿ'' ಅಂತ ಅಂದಳು.

ಪೊರಕೆ ಹಿಡ್ಕೊಂಡು ಬೀದಿಗೆ ಇಳಿದೆ. ಇನ್ನು ಇದಕ್ಕಿಂತ ದೊಡ್ಡ ಆಘಾತ ನಡೆಯೋದು ಸಾಧ್ಯವೇ? ನೀವೇ ಹೇಳಿ.

❋

---

**ಕನ್ನಡದ ಆಧುನಿಕ ಕಾವ್ಯ ಪರಂಪರೆಗೆ ಅಸ್ತಿಭಾರ ಹಾಕಿದ ದಿಗ್ಗಜರು**
**– ಶ್ರೀ ಬಿ.ಎಂ. ಶ್ರೀಕಂಠಯ್ಯ ಮತ್ತು ಶ್ರೀ ಮಂಜೇಶ್ವರ ಗೋವಿಂದ ಪೈ**

# ಸಚಿನ್ ಎಂಬ ಮುಗಿದ ಧಾರಾವಾಹಿ

*ಸಚಿನ್ ನಿವೃತ್ತಿಯ ಬಗ್ಗೆ ಪ್ರತಿಕ್ರಿಯಿಸಿ ಅಪರಂಜಿಗೆ ಬಾರದ ಅಸಂಖ್ಯಾತ ಪತ್ರಗಳಲ್ಲಿ ಆಯ್ದ ಕೆಲವನ್ನು ಇಲ್ಲಿ ಪ್ರಕಟಿಸುತ್ತಿದ್ದೇವೆ. – ಸಂಪಾದಕ*

ಸಚಿನ್ ನಿವೃತ್ತಿ? ಛೆ! ಇಷ್ಟು ಬೇಗ?

**ನಿಮಿಷಾಂಬ, ಶ್ರೀರಂಗಪಟ್ಟಣ**

ಏನು ದೇವರಿಗೂ ನಿವೃತ್ತಿಯೆ? ಶಿವ ಶಿವಾ..!

**ಮಂಜುನಾಥ, ಧರ್ಮಸ್ಥಳ**

ಇನ್ನೊಂದಿಷ್ಟು ಕಾಲ ಆಡಿದ್ದಿದ್ದರೆ ಅವರ ಗಂಟೇನು ಹೋಗುತ್ತಿತ್ತು? ನಾನು ಹೇಗೂ ನಿವೃತ್ತಿ ಆಗಿದ್ದು ಆರಾಮವಾಗಿ ಅವರ ಆಟ ನೋಡಬಹುದಿತ್ತು.

**ಹೆಸರು, ಊರೂ ಇಲ್ಲ**

ಏನು ಸಚಿನ್ ಆಡುವುದಿಲ್ಲವೆ? ಓ ಗಾಡ್!

**ಬಾಲಾಜಿ, ಅಲಿಪುರಿ**

ಇನ್ನೊಂದು ವರ್ಷ ಆಡಿದ್ದರೆ 25 ವರ್ಷ ಆಗುತ್ತಿತ್ತು. ಸಿಲ್ವರ್ ಜ್ಯುಬಿಲಿ ಮಾಡಿ ರಿಟೈರ್ ಆಗಬಹುದಿತ್ತು. ಏಕೆ ಮಾಡಲಿಲ್ಲ?

**ಕ್ರಿಕೆಟ್‌ಪ್ರಿಯ, ಎಲ್ಲಾ ಊರು**

ಅಯ್ಯೋ! ಇನ್ನೇನು ಗತಿ!

**ವೈಟ್ ಫ್ಲಾನೆಲ್, ಬ್ಲೂ ಮೌಂಟನ್ಸ್**

ಇನ್ನು ಮುಂದೆ ಕ್ರಿಕೆಟ್ ನೋಡಿ ಏನು ಪ್ರಯೋಜನ?

**ಚೆಲುವರಾಯ, ಮೇಲುಕೋಟೆ**

ನಾನು ಇನ್ನು ಮುಂದೆ ನಾನು ಬರೇ ಧಾರಾವಾಹಿಗಳನ್ನು ನೋಡುತ್ತೇನೆ.

**ಹೆಸರೇಕೆ, ಊರೂ ಬೇಡ**

ಸಚಿನ್ ಇಲ್ಲದ ಕ್ರಿಕೆಟ್‌ನಿಂದ ಏನು ಪ್ರಯೋಜನ?

**ನಿರಾಶಾ ರಾವ್, ಎಲ್ಲೆಡೆ**

-★★★--★★★--★★★--★★★--★★★--★★★--★★★--★★★--★★★--★★★-

**ಹೆಳವನ ಕಟ್ಟೆ ಗಿರಿಯಮ್ಮ ಕ್ರಿ.ಶ. 1750ರಲ್ಲಿ ರಚಿಸಿದ ಕೃತಿ**
**– ''ಉದ್ದಾಳನ ಕಥೆ''**

ಸೆಂಚುರಿ ಹೊಡೆದ ಮೇಲೆ ಆಕಾಶದತ್ತ ಮುಖ ಮಾಡುವವರು ಯಾರು ಇನ್ನು ಮುಂದೆ?

**ಪುಟಾಣಿ ಮಕ್ಕಳು, ಕಾನ್ವೆಂಟ್**

ಇನ್ನು ಮುಂದೆ ನಾನು ಬೂಸ್ಟ್ ಕುಡಿಯದಿರಲು ನಿರ್ಧರಿಸಿದ್ದೇನೆ.

**ಶಕ್ತಿಮಾನ್, ಶಕ್ತಿನಗರ್**

ಇನ್ನು ಮುಂದೆ ಸಚಿನ್ ಯಾವ ಎನರ್ಜಿ ಡ್ರಿಂಕ್ ಕುಡಿಯುತ್ತಾರೆ ಎಂದು ತಿಳಿಯುವುದು ಹೇಗೆ?

**ಸಣ್ಣವ, ದೊಡ್ಡೂರು**

ಸಚಿನ್ ಮಗ ಅರ್ಜುನ್ ಸಹ ಬೂಸ್ಟ್ ಕುಡಿಯುತ್ತಾನೆಯೆ? ಬೇಗ ತಿಳಿಸಿ.

**ಅಭಿಮನ್ಯು, ಹಸ್ತಿನಾಪುರ**

ನಾನಂತೂ ಸಚಿನ್ ಮಗ ಕ್ರೀಸ್‌ಗೆ ಬರುವುದನ್ನೇ ಕಾಯುತ್ತಿದ್ದೇನೆ.

**ಕೃಷ್ಣ, ದ್ವಾರಕ**

ನಿವೃತ್ತಿ ಆದ ಮೇಲೆ ಅವರು ಟೀವಿಯಲ್ಲಿ ಹೇಗೆ? ಏಕೆ? ಕಾಣಿಸಿಕೊಳ್ಳುತ್ತಾರೆಂಬುದರ ಬಗ್ಗೆ ಕುತೂಹಲ ಇದೆ.

**ವೀಕ್ಷಕ, ದೂ ದ ನಗರ**

ಈಗಲಾದರೂ ಅವರು ರಾಜ್ಯ ಸಭೆಯಲ್ಲಿ ಮಾತನಾಡುವ ಇನ್ನಿಂಗ್ಸ್ ಪ್ರಾರಂಭಿಸುವರೆ?

**ವಾಚಾಳಿ, ಶಬ್ದನಗರ್**

ರಾಜ್ಯ ಸಭೆಯಲ್ಲಿ ಎಂತಹ ದಾಖಲೆ ಮಾಡುವರೋ ನೋಡಬೇಕು.

**ದಾಖಲಾ, ಎನಿ ಟೌನ್**

---

### ತರ್ಕ ಎಂದರೆ ಇದು

ಮರಿ ಪುಡಾರಿಯೊಬ್ಬ ರಾಜಕೀಯಕ್ಕೆ ಸೇರಲು ಎಲ್ಲ ಪಕ್ಷಗಳಿಗೂ ಅರ್ಜಿ ಹಾಕಿದ. ಅದನ್ನು ಗಮನಿಸಿದ ಹಿರಿಯರೊಬ್ಬರು: "ನಿನಗೆ ನಂಬಿಕೆ ಇರುವ ಯಾವುದಾದರೂ ಒಂದು ರಾಜಕೀಯ ಪಕ್ಷದ ಜತೆ ಗುರುತಿಸ್ಕೊ. ಹೀಗೆ ಎಲ್ಲ ಪಕ್ಷಕ್ಕೂ ಅರ್ಜಿ ಹಾಕೋದು ಸರಿಯಲ್ಲ" ಎಂದು ಹೇಳಿದರು.

"ಮಕ್ಕಳನ್ನು ಸ್ಕೂಲಿಗೆ ಸೇರಿಸುವಾಗ ಏನು ಮಾಡ್ತೀವಿ. ನಾಲ್ಕು ಸ್ಕೂಲಿಗೆ ಅರ್ಜಿ ಹಾಕ್ತೀವಿ. ನಾಲ್ಕು ಕಡೆ ಸೀಟ್ ಸಿಗ್ತದೆ. ಅದರಲ್ಲಿ ಒಂದು ಬೇಕಾದ ಸ್ಕೂಲ್ ಆರಿಸಿಕೊಳ್ತೀವಿ. ಇದೂ ಹಂಗೆ" ಎಂದ ಕೂಲಾಗಿ.

-★★★--★★★--★★★--★★★--★★★--★★★--★★★--★★★--★★★--★★★-

**ಮೊಟ್ಟಮೊದಲ ಕನ್ನಡ ಸಾಹಿತ್ಯ ಚರಿತ್ರೆ ಬರೆದವರು**
**- ಇ.ಪಿ. ರೈಸ್ (ಕ್ರಿ.ಶ. 1915ರಲ್ಲಿ)**

# ಅಜ್ಜಿಗೂ ಅಂಟಿತು ಫೇಸ್‌ಬುಕ್ ಗೀಳು

**- ಆರತಿ ಘಟಿಕಾರ್, ದುಬೈ**

**ಪ್ರ**ತಿವರ್ಷವೂ ಮಕ್ಕಳ ಬೇಸಿಗೆ ರಜೆಗೆ ನಾವುಗಳೆಲ್ಲ ಭಾರತಕ್ಕೆ ಹೋಗುವ ರೂಢಿ. ಆದರೆ ಕಾರಣಾಂತರಗಳಿಂದ ನಾವು ಆ ಸಲದ ವಾರ್ಷಿಕ ರಜೆಗೆ ಬೆಂಗಳೂರಿಗೆ ಹೋಗಲಾಗಲಿಲ್ಲ. ಸರಿ ಅಪ್ಪ ಅಮ್ಮನಿಗೆ ಫೋನಾಯಿಸಿ ಹೇಗೂ ನೀವು ನಮ್ಮೂರಿಗೆ ಬಂದು ಬಹಳ ವರ್ಷ ಆಯ್ತಲ್ಲ, ಈ ಬಾರಿ ನೀವೇ ಈ ಕಡೆ ಬಂದು ಬಿಡಿ ಅಂತ ಹೇಳಿ ಇಲ್ಲಿಗೇ ಕರೆಸಿದೆ.

ಅವರುಗಳು ಬಂದು ಈ ಊರು, ದಿನಚರಿಗೆ ಹೊಂದಿಕೊಂಡು ಸ್ವಲ್ಪ ದಿನಗಳಾದ ನಂತರ ಅಜ್ಜ-ಅಜ್ಜಿ ಮಧ್ಯಾಹ್ನದ ಹೊತ್ತು ಊಟವಾದ ಬಳಿಕ ಸ್ವಲ್ಪ ಬಿಡುವಾಗಿರುವುದನ್ನು ನೋಡಿ ನನ್ನ ಮಗ ರಾಜ ''ಅಜ್ಜ ನೀನೂ ಫೇಸ್‌ಬುಕ್ ಅಕೌಂಟ್ ಮಾಡ್ಕೊಂಡ್ ಬಿಡು, ಅಲ್ಲಿ ನಿಮ್ಮೆಲ್ಲಾ ಬಂಧು ಬಳಗದವರು, ಸ್ನೇಹಿತರ ಜೊತೆ ಸಂಪರ್ಕದಲ್ಲಿ ಇರಬಹುದು, ಹಾಗೇನೇ ನಿಮಗೂ ಬೋರ್ ಆಗಲ್ಲ'' ಅಂತ ಅದರ ಬಗ್ಗೆ ಒಂದು ಚಿಕ್ಕ ವಿವರಣೆ ಕೊಡುತ್ತಾ ಆಸಕ್ತಿ ಕೆರಳಿಸಿದ.

**ಅಜ್ಜಿಗೆ ಫೇಸ್ ಬುಕ್ ಮಾಡಿದ ಮೋಡಿ**

ನಮ್ಮ ತಂದೇನೂ ''ಹೌದು ಕಣೋ ನನ್ನ ಫ್ರೆಂಡ್ಸು ಹೇಳ್ತಾ ಇರತರಾಪ್ಪ ಅದೇನೋ ಫೇಸ್‌ಬುಕ್ಕೋ, ಹ್ಯಾಂಡ್‌ಬುಕ್ಕೋ ಅಂತ ಏನೊ ಇದ್ಯಂತೆ, ಅದರಲ್ಲಿ ಎಷ್ಟೋ ದೂರದಲ್ಲಿ ಇರುವ ನಮ್ಮ ಬಂಧು ಬಳಗ ಸ್ನೇಹಿತರ ಜೊತೆ ಸಂಪರ್ಕದಲ್ಲಿ ಇರೋದಲ್ಲದೆ ಎಲ್ಲರ ಬಗ್ಗೆ ಸುದ್ದಿ ಸಮಾಚಾರವನ್ನೂ (ಫೋನ್ ಖರ್ಚಿಲ್ಲದೆ) ತಿಳ್ಕೊಳ್ಳಬಹುದಂತೆ ಅಲ್ವೇನೋ? ಅಷ್ಟೇ ಅಲ್ಲಾ ಕಣ್ರೀ ಅವರುಗಳು ಹಾಕಿದ ಫೋಟೋಗಳನ್ನೆಲ್ಲಾ ಹಾಕಿದ ತಕ್ಷಣವೇ ನೋಡಿ ಹೇಗಿದೆ ಅಂತ ತಿಳಿಸಬಹುದಂತೆ, ಜೊತೆಗೆ ಗಂಟೆ ಗಟ್ಟಲೆ ಹರಟೇನೂ ಹೊಡೀಬಹುದಂತೆ.'' ಹರಟೆ ಮಲ್ಲಿ ಅಜ್ಜಿನೂ ಉತ್ಸಾಹದಲ್ಲಿ ಧ್ವನಿಗೂಡಿಸಿದರು. ನಮ್ಮ ರಾಜ ''ಸರಿ ಅಜ್ಜಿ ಹಾಗಾದ್ರೆ ನಿಮ್ಮ ಹೆಸರಲ್ಲಿ ಫೇಸ್‌ಬುಕ್ ಅಕೌಂಟ್ ತೆಗೆದು ಬಿಡ್ತೀನಿ'' ಅಂದ.

ನನ್ನ ತಂದೆ ''ಹಾಗಾದ್ರೆ ಮರಿ ಒಂದೇ ಅಕೌಂಟ್ ತೆಗೆದು ಬಿಡು, ಜಾಯಿಂಟ್ ಅಕೌಂಟ್ ನಂದು ನಿಮ್ಮಮ್ಮಂದು. ಸುಮ್ನೆ ಎರಡೆರಡು ಅಕೌಂಟ್ ಯಾಕೆ'' ಅಂದ್ರು. ನಮ್ಮಮ್ಮನಿಗೆ ರೇಗಿತು ''ಅದೆಲ್ಲಾ ಏನೂ ಬೇಡ, ಇಲ್ಲಾದರೂ ನಂದು ಸಪರೇಟ್ ಅಕೌಂಟ್ ತೆಗ್ಯಪ್ಪ, ಅದೇನು ಬ್ಯಾಂಕಿನ ವ್ಯವಹಾರ ಅನ್ಕೊಂಡ್ರಾ ನಿಮ್ಮ ಜೊತೆ ಜಾಯಿಂಟ್ ಅಕೌಂಟ್ ತೆಗೆಯಕ್ಕೆ'' ಎಂದು ಅಪ್ಪನನ್ನು ಕುಟುಕಿದಾಗ ಅಲ್ಲೆ ಇವರ someವಾದ ಕೇಳುತ್ತಿದ್ದ ನನಗೆ ನಗುವಿನ

---

**ಕನ್ನಡದಲ್ಲಿ ಮೊದಲ ಬಾರಿಗೆ ತೀರ್ಪು ನೀಡಿದ ಕನ್ನಡಿಗ - ಜಯತೀರ್ಥ ರಾಜಪುರೋಹಿತ**

ಜೊತೆಗೆ ಸಿಕ್ಕಾಪಟ್ಟೆ ಸ್ಫೂರ್ತಿ ಉಕ್ಕಿ ಬಂದು ಈ ಒಂದು ಚುಟುಕನ್ನು ಅವರಿಗಾಗಿ ಅರ್ಪಿಸಿಯೇ ಬಿಟ್ಟೆ!

*ಪತ್ನಿ ನೌಕರಿಗೆ*
*ಸೇರಿದೊಡೆ*
*ಅಧಿಕವಾಯಿತು ಅವನ*
*ಪ್ರೀತಿಯ ನಂಟು;*
*ದೃಢಪಡಿಸಲು ತೆಗೆಸಿದನಲ್ಲ*
*ಜಾಯಿಂಟ್ ಅಕೌಂಟು!*

ಅಮ್ಮ ಅದನ್ನು ಆಸಕ್ತಿಯಿಂದ ಆಲಿಸಿ ಮುಗುಳ್ನಕ್ಕು ''ಹೌದು ಕಣೆ ಸರಿಯಾಗಿ ಹೇಳ್ದೆ! ಸದ್ಯ ಮುಖಪುಸ್ತಕದ ಖಾತೆ ಪುಕ್ಕಟೆ ಇರೋದ್ರಿಂದ ಪರವಾಗಿಲ್ಲ, ಇಲ್ಲದಿದ್ದರೆ ನಿಮ್ಮ ತಂದೆ ಗೊತ್ತಲ್ಲ ಮೊದಲಿನ ಹಾಗೆ ಏನಾದ್ರೂ ತಕರಾರು ತೆಗೀತಿದ್ರು'' ಅಪ್ಪನ ಕಡೆ ಕೈ ಮಾಡಿ ತೋರಿಸಿದರು.

ನಾನು ಇಬ್ಬರನ್ನೂ ಸಮಾಧಾನಪಡಿಸುತ್ತಾ ''ಅಯ್ಯೋ ಯಾಕೆ ಸುಮ್ಮನೆ ತಲೆ ಕೆಡಿಸ್ಕೊತೀರ? ಇದು ಫ್ರೀ! ಇಬ್ಬರಿಗೂ ಬೇರೆ ಬೇರೆ ಅಕೌಂಟ್ ತೆಗೀತೀವಿ, ಏನೂ ಯೋಚನೆ ಮಾಡಬೇಡಿ.'' ಫೇಸ್‌ಬುಕ್ ಕಂಪನಿಯ ಅಧಿಕೃತ ಪ್ರತಿನಿಧಿಯ ಹಾಗೆ ನಗುತ್ತಾ ಆಶ್ವಾಸನೆ ನೀಡಿದೆ! ಸರಿ ನಮ್ಮ ರಾಜ ಫೇಸ್‌ಬುಕ್ಕಿನಲ್ಲಿ ಅಜ್ಜ ಅಜ್ಜಿಯ ಫೋಟೋಗಳನ್ನ ಹಾಕಿ ಪ್ರೊಫೈಲ್ ಐಡಿ ಮಾಡಿ, ಇಬ್ಬರ ಕಡೆಯಿಂದಲೂ ಬಂಧು ಬಳಗದವರನ್ನು ಅಲ್ಲದೆ ಕೆಲವು ಹಳೆ ಸ್ನೇಹಿತರನ್ನ ಹರಸಾಹಸ ಮಾಡಿ ಅವರ ಮಕ್ಕಳ ಮುಖಪುಸ್ತಕದ ಖಾತೆಯ ಮೂಲಕ ಹುಡುಕಿ ತೆಗೆದು ಸ್ನೇಹಿತರ ಪಟ್ಟಿಯಲ್ಲಿ ಸೇರಿಸಿ ''ತಾನು ಕಲಿತ (ಫೇಸ್‌ಬುಕ್) ವಿದ್ಯೆಯನ್ನೆಲ್ಲಾ ಧಾರೆ ಎರೆಯಲು ಉತ್ಸಾಹ ತೋರಿಸಿದ! ರಾಜನ ನೇತೃತ್ವದಲ್ಲಿ ಅಜ್ಜ ಅಜ್ಜಿ ವಿಧೇಯ ವಿದ್ಯಾರ್ಥಿಗಳಂತೆ ಅವನ ಟ್ರೈನಿಂಗ್ ಶುರು ಮಾಡುವುದನ್ನೇ ಎದುರು ನೋಡುತ್ತಿದ್ದರು. ರಾಜನ ಶಾಲೆಗೆ ಬೇಸಿಗೆ ರಜಾ ಇದ್ದ ಕಾರಣ ಮಾರನೆಯ ದಿನದಿಂದಲೇ ಒಂದೆರೆಡು ಗಂಟೆ ಇಬ್ಬರನ್ನೂ ಕೂಡಿಸಿ ಮುಖಪುಸ್ತಕದ ಪರಿಚಯ ಮಾಡಿಸಿದಾಗ ಇಬ್ಬರಿಗೂ ಹುರುಪು. ಎಷ್ಟೋ ವರ್ಷಗಳ ನಂತರ ಭೇಟಿ ಆದ ಕೆಲವು ಸ್ನೇಹಿತರು, ಬಳಗದವರ, ಅವರ ಈಗಿನ ಸ್ಥಿತಿಗತಿಗಳು, ಅವರ ಪರಿವಾರ ಎಲ್ಲವನ್ನೂ ಕಂಡು ಅಪರೂಪದ ನಿಧಿ ಸಿಕ್ಕ ಹಾಗೆ ಸಂತಸಗೊಂಡರು.''

ಕೆಲವೊಮ್ಮೆ ರಾಜನ ಸಹಾಯದಿಂದ ಹಳೆ ಸ್ನೇಹಿತರು, ಬಂಧುಗಳ ಜೊತೆ ಮುಖಪುಸ್ತಕದ ಕಾಂಪೌಂಡ್ ಗೋಡೆ ಬಳಿನಿಂತು ಗಂಟೆ ಗಟ್ಟಲೆ ತಮ್ಮ ಹಳೆಯ (ಹರಿ)ಕಥೆಗಳನ್ನು, ಮರೆಯದ ಘಟನೆಗಳನ್ನು ನೆನೆಸಿಕೊಳ್ಳುತ್ತಾ ಸಾಗಿತು. ಅವರ ಅಪರೂಪದ ಹರಟೆ! ಇನ್ನು ಅಮ್ಮನ ಹಾಗಿರುವ ಸಮಾನ ವಯಸ್ಕರು/ಆಸಕ್ತರ ಪರಿಚಯಗಳೂ ಚಿಗುರೊಡೆದು ಅವರ

**ಕನ್ನಡದಲ್ಲಿ ಪುಸ್ತಕೋದ್ಯಮಕ್ಕೆ ಮೀಸಲಾದ ಮೊದಲ ಪತ್ರಿಕೆ**
**- ಗ್ರಂಥಲೋಕ**

ಸ್ನೇಹವಲಯ ಇನ್ನಷ್ಟು ಹಬ್ಬಿತು. ಹಾಗೆಯೇ ಬಂಧು ಬಳಗದವರು ಅದ್ದೂರಿಯಾಗಿ ಆಚರಿಸಿಕೊಂಡ ಹುಟ್ಟುಹಬ್ಬ, ವಾರ್ಷಿಕೋತ್ಸವ, ಮಜವಾಗಿ ಸುತ್ತಾಡಿ ಬಂದ ಹೊಸ ವಿಹಾರ ತಾಣಗಳು ಅಂತೆಲ್ಲಾ (ಕೆಲವರ ಹೊಟ್ಟೆ ಉರಿಸುತ್ತಾ!) ಮುಖ ಪುಸ್ತಕದ ಗೋಡೆಯ ಮೇಲೆ ಆಗಾಗ ರಾರಾಜಿಸುವ ಫೋಟೋಗಳು! ಇನ್ನು ಸ್ನೇಹಿತರ ವಯಕ್ತಿಕ ಪ್ರಕಟಣೆಗಳು ಎಲ್ಲಿಂದಲೋ ಕದ್ದ ಜೋಕುಗಳನ್ನ ಹಾಕಿ ಕಾಮೆಂಟು ಎದುರು ನೋಡುವ ಜೋಕುಮಾರರು! ಇವರ ಪ್ರಕಟಣೆಗಳಿಗೆ ಬಂದು ಬೀಳುವ ಲೈಕು ಹಾಗು ಕಾಮೆಂಟುಗಳ ಆಧಾರದಿಂದ ಫೇಸ್‌ಬುಕ್ ಸಮಾಜದಲ್ಲಿ ಇವರ ಸ್ಟೇಟಸ್ ಏನು ಎಂಬುದು ಅಂದಾಜು ಮಾಡಬಹುದೇನೋ! ಅಷ್ಟೇ ಅಲ್ಲದೆ ಕೆಲ ಪೋಷಕರು ತಮ್ಮ ಮುದ್ದು ಮಕ್ಕಳು ಡ್ರಾಯಿಂಗ್ ಅನ್ನುವ ಹೆಸರಿನಲ್ಲಿ ಗೀಚಿದ ಮನೆ, ಗುಬ್ಬಿ, ಸೂರ್ಯನ ಚಿತ್ರಗಳನ್ನು ಹಾಕಿ ಖುಷಿಪಟ್ಟರೆ, ಕೆಲವು ಪ್ರಾಣಿಪ್ರಿಯರು ತಾವು ಹೊಸದಾಗಿ ತಂದ ನಾಯಿ/ಬೆಕ್ಕಿನ ಮರಿಗಳ ಫೋಟೋಗಳನ್ನು ಹಾಕುವುದಲ್ಲದೆ ತಮ್ಮ ಸಾಕು ಪ್ರಾಣಿಗಳ ಹೆಸರಿನಲ್ಲಿ ಫೇಸ್‌ಬುಕ್ ಅಕೌಂಟ್ ತೆಗೆದು ತಮ್ಮ ಒಲವಿನ ಧಾರೆ ಹರಿಸಿದ್ದರು! ಇದಲ್ಲದೆ ಕೆಲವು ಉತ್ಸಾಹಿ ಪಾಕ ಪ್ರವೀಣ ಗೃಹಿಣಿಯರು ತಾವು (ಗಂಡನ ಮೇಲೆ) ಪ್ರಯೋಗ ಮಾಡಿದ ತಿಂಡಿ ತಿನಸುಗಳ ಫೋಟೋಗಳು!! ಅಬ್ಬಬ್ಬ ಒಂದೇ ಎರಡೇ!

ಇದನ್ನೆಲ್ಲಾ ಆಸಕ್ತಿಯಿಂದ ನೋಡುತ್ತಿದ್ದ ಅಮ್ಮನಿಗೆ ನಮ್ಮ ರಾಜ ''ಅಜ್ಜಿ ಇದರ ಬಗ್ಗೆ ನಿಮಗೇನನಿಸುತ್ತೆ ಅಂತ ಒಂದು ಸಾಲು ಬರೆದ್ಬಿಡಿ ಅವರಿಗೂ ಖುಷಿ ಆಗುತ್ತೆ. ನಿಮ್ಮ ಕಾಮೆಂಟ್ ನೋಡಿ'' ಅಂತ ಹುರಿದುಂಬಿಸಿದಾಗ ಅಮ್ಮ ಕೂಡಾ ಹುರುಪಿನಿಂದ ಅದಕ್ಕೆಲ್ಲಾ ತಮ್ಮ ಸುಧೀರ್ಘ ಒಕ್ಕಣೆಯನ್ನು ಕಾಮೆಂಟಿನ ರೂಪದಲ್ಲಿ ಕೊಟ್ಟು, ಅದಕ್ಕೆ ಅವರ ಕಡೆಯಿಂದ ಏನು ಪ್ರತ್ಯುತ್ತರ ಬರುವುದೋ ಎಂದು ಕುತೂಹಲದಿಂದ ದಿನ ಬೆಳಗಾದರೆ ಕಾಯುವುದೇ ಕೆಲಸವಾಯಿತು! (ಸದ್ಯ ನೀವೇಕೆ ಉತ್ತರ ಕೊಟ್ಟಿಲ್ಲ ಅಂತ ಫೋನಾಯಿಸಿ ಕೇಳುವುದೊಂದು ಬಾಕಿ) ಏನೇ ಅನ್ನಿ ಅಮ್ಮನಿಗೆ ಈ ಫೇಸ್‌ಬುಕ್ ಗೀಳು ಹಿಡುಸುವಲ್ಲಿ ನನ್ನ ಮಗ ಯಶಸ್ವಿ ಆಗಿಬಿಟ್ಟ.

ಒಮ್ಮೆ ಹೀಗೆ ಅಮ್ಮ ಬಿಡುವಿನ ಸಮಯದಲ್ಲಿ ಆಸಕ್ತಿಯಿಂದ ಮುಖಪುಸ್ತಕದ ಗೋಡೆಯನ್ನೇ ನೋಡುತ್ತಿದ್ದಾಗ ರಾಜ ''ಏನ್ ಅಜ್ಜಿ ನಿಮ್ಗೆ ಹೇಗನ್ನಸ್ತಾ ಇದೆ?'' ಎಂದಾಗ ಅಮ್ಮ ''ಯಾಕೊ ಮಂಡಿನೋವು, ಕೈ ಸೆಳ್ತಾ ಕಣೋ ರಾಜ, ಪಾಪ ನೀನು ಇಷ್ಟು ವಿಚಾರಿಸಿ ಕೊಳ್ತಾ ಇರೋದು ನೋಡಿ ಖುಷಿ ಆಗತ್ತಪ್ಪ'' ಅಂತ ಹೆಮ್ಮೆಯಿಂದ ನುಡಿದಾಗ ರಾಜ ಸುಮ್ಮನಿರದೆ ''ಅಯ್ಯೋ ಅಜ್ಜಿ ನಾನ್ ಕೇಳ್ತಾ ಇಲ್ಲ ಇದು ನೋಡಿ ಫೇಸ್‌ಬುಕ್ ಕೇಳ್ತಾ ಇದೆ'' "How are u feeling?" ಅಂತ.

-★★★--★★★--★★★--★★★--★★★--★★★--★★★--★★★--★★★--★★★-

**ಮೊದಲ ಸಂಚಾರಿ ನೇತ್ರಾಲಯ ಪ್ರಾರಂಭಿಸಿದ ಕನ್ನಡಿಗ**

**- ಡಾ. ಎಂ.ಸಿ. ಮೋದಿ**

ಅಮ್ಮನಿಗೆ ಗಾಬರಿ ''ಓಹೋ ಇದನ್ನೆಲ್ಲಾ ನಾವು ಇಲ್ಲಿ ಬರೀಬೇಕಾ ಹಾಗಾದ್ರೆ?'' ಮುಗ್ಧತೆಯಿಂದ ಕೇಳಿದಾಗ ರಾಜ ನಗುತ್ತಾ ''ಅಯ್ಯೋ ಅಜ್ಜಿ ಏನ್ ಹೇಳ್ಲಿ ನಿನಗೆ? ಎಲ್ಲರೂ ಇಲ್ಲಿ ಸತ್ಯಾನೇ ಬರೀತಾರೆ ಅನ್ಕೊಂಡ್ರಾ?'' ಅಮ್ಮನ್ನ ಕೇಳಿ ಬೇಕಾದ್ರೆ, ಒಮ್ಮೆ ಅಮ್ಮನ ಗೆಳತಿ ಯಾರೋ ''ಅವರು ಮಾಡಿದ ಕ್ಯಾಂಡಲ್ ಲೈಟ್ ಡಿನ್ನರ್ (ಮೋಂಬತ್ತಿ ಬೆಳಕಿನ ಊಟ)ದ ಕೆಲವು ಚಿತ್ರಗಳನ್ನ ಮುಖಪುಸ್ತಕದಲ್ಲಿ ಹಾಕಿದನ್ನು ಇವರೆಲ್ಲಾ ನೋಡಿ ''ಓಹ್ ಎಷ್ಟು ರೊಮ್ಯಾಂಟಿಕ್ ಆಗಿದೆ ಅಲ್ವಾ!'' ಅಂತ ಕಾಮೆಂಟುಗಳ ಸುರಿಮಳೆ ಹರಿಸಿದ್ದೇ ಹರಿಸಿದ್ದು! ಆಮೇಲೆ ಗೊತ್ತಾಯ್ತುಂತೆ ಅವರ ಫ್ರೆಂಡ್ ಮನೇಲಿ ಕರ್ರೆಂಟ್ ಹೋಗಿ ಕಡ್ಡಾಯವಾಗಿ ಮೋಂಬತ್ತಿ ಹಚ್ಚಿಯೇ ಊಟ ಮಾಡುವ ಪರಿಸ್ಥಿತಿ ಬಂದಿತ್ತು ಅಂತ!''

ನಾನು ನಗುತ್ತ ''ಲೋ ರಾಜ ಇದೆಲ್ಲಾ ನಿನಗೆ ಚೆನ್ನಾಗಿ ನೆನ್ಪಿರತ್ತೆ ಬಿಡು! ಅದೇ ಯಾವುದಾದರೂ ಪಾಠದ ಬಗ್ಗೆ ಕೇಳಿದರೆ ನನಗೂ ಈ ಪ್ರಶ್ನೆಗೂ ಏನ್ ಸಂಬಂಧ ಅನ್ನೋ ತರ ಲುಕ್ ಕೊಡ್ತೀಯ!'' ಅಂತ ಅವನನ್ನು ರೇಗಿಸಿದರೂ ಅವನು ಹೇಳಿದ ವಿಷಯಕ್ಕೆ ಮತ್ತೆ ಎಂಟ್ರಿ ಕೊಟ್ಟೆ ''ಹೌದಮ್ಮ ಹೀಗೆಲ್ಲಾ ಒಮ್ಮೊಮ್ಮೆ ತಮಾಷೆ ನಡೀತಾ ಇರುತ್ತೆ.'' ಇದು ಬಿಡು ಮೊನ್ನೆ ನನ್ನ ಗೆಳತಿಯೊಬ್ಬಳು, ''ಇವೆಲ್ಲಾ ನಾನು ದೀಪಾವಳಿ ಹಬ್ಬಕ್ಕೆ ಮಾಡಿದ ತಿಂಡಿಗಳು'' ಅಂತ ಅಂತರ್ಜಾಲದಿಂದ ಎತ್ತಿಕೊಂಡಿದ್ದ ಫೋಟೋ ಹಾಕಿ ಒಳ್ಳೇ ಫೋಸ್ ಕೊಟ್ಟಿದ್ದಳು. ಆಹಾ ಬಾಯಲ್ಲಿ ನೀರೂರಿಸುವ ತಿಂಡಿಗಳು ಒಂದೇ ಎರಡೇ! ಚಕ್ಕಲಿ, ಕೊಬ್ಬರಿ ಮಿಠಾಯಿ, ಕೋಡಬಳೆ, ಮೈಸೂರ್ ಪಾಕು...! ಸರಿ ಬೇರೆ ಊರಿನಲ್ಲಿದ್ದ ಅವಳ ನಾದುನಿ ಆ ಫೋಟೋ ತಮ್ಮ ಅಮ್ಮನಿಗೆ ತೋರಿಸಿದಾಗ, ಅವಳ ಅತ್ತೆಯವರು, ಇಷ್ಟರ ಮಟ್ಟಿಗೆ ಪಾಕ ಪ್ರಾವೀಣ್ಯತೆ ಹೊಂದಿರುವ ತಮ್ಮ ಸೊಸೆಯ ಬಗ್ಗೆ ಪ್ರಶಂಸೆ ವ್ಯಕ್ತಪಡಿಸಿ, ಈ ಸಲ ದೀಪಾವಳಿಗೆ ಊರಿಗೆ ಬಂದಾಗ ನೀನೇ ಇವನ್ನೆಲ್ಲಾ ಮಾಡಮ್ಮಾ ಅಂತ ಬೆನ್ನು ಹತ್ತಿದ್ದಾರಂತೆ! ಎಂದು ಅಮ್ಮನ ಆಶ್ಚರ್ಯ ಬೆರೆತ ನಗುಮುಖವನ್ನು ನೋಡಿ ಮುಗುಳ್ನಕ್ಕೆ.

ಅಷ್ಟರಲ್ಲಿ ನಮ್ಮ ಮನೆಯ ಕರಗಂಟೆ ಸದ್ದು ನನ್ನ ಪತಿ ಕಛೇರಿಯಿಂದ ಬರುವ ಸೂಚನೆ ಕೊಟ್ಟಿತು. ಇವರ ಮೇಲೊಂದು ನನಗೆ ಲೈಟಾಗಿ ಕೋಪ! ಕಾರಣ ಇಷ್ಟೇ, ಮುಖಪುಸ್ತಕದಲ್ಲಿ ನಾನಂದು ಬರೆದು ಹಾಕಿದ ಘನ ಗಂಭೀರ ಚುಟುಕಿಗೆ ಇವರದು ಬರೀ ಒಂದು ಸಪ್ಪೆ ಲೈಕು! ಅದೇ ಅವರ ಕಛೇರಿಯಲ್ಲಿ ಕೆಲಸ ಮಾಡುತ್ತಿದ್ದ ಪೂಜಾಳ ಫೋಟೋಗೆ ಇವರದು ಸಿಕ್ಕಾಪಟ್ಟೆ ಹೊಗಳಿಕೆಯ ಕಾಮೆಂಟು! ಬರಲಿ ವಿಚಾರಿಸ್ಕೊಳ್ತೇನೆ ಅಂದುಕೊಂಡಾಗ, ಯಾಕೋ ನನ್ನ ಈ ಹನಿಗವನ ನೆನಪಾಯಿತು!

*ಮಡದಿಯ ನಗು ಮುಖದ*
*ಸ್ವಾಗತವ ಬಯಸಿ ದಿನವೂ*
*ಒತ್ತುತ್ತೇನೆ ಕರೆಗಂಟೆ*
*ಆದರೆ ಎಂದಿನಂತೆ*

--★★★--★★★--★★★--★★★--★★★--★★★--★★★--★★★--★★★--★★★--

**ಗಾಂಧಿ ಸಾಹಿತ್ಯವನ್ನು ಮೊದಲಿಗೆ ಕನ್ನಡಕ್ಕೆ ತಂದವರು**
**- ಸಿದ್ದವನಹಳ್ಳಿ ಕೃಷ್ಣಶರ್ಮ**

*ಇವಳ ಮುಖ ಇಂದೂ*

*ಕೂಡ ಗಂಟೇ!*

ಸರಿ ನನ್ನ ಸಿಟ್ಟಿನ ಮುಖಕ್ಕೆ ಕೊಂಚ ಮಂದಹಾಸದ ಮೇಕಪ್ ಹಾಕಿಕೊಂಡು ನಿಧಾನವಾಗಿ ನನ್ನದೇ ಸ್ಟೈಲಿನಲ್ಲಿ ವಿಚಾರಿಸಿಕೊಂಡೆ. ಇವರು ಅಂಜದೆ ಅಳುಕದೆ ತಕ್ಷಣವೇ ಉತ್ತರಮುಖಿಯಾದರು! ''ಅಯ್ಯೋ ಇಷ್ಟು ಸಣ್ಣ ವಿಷಯಕ್ಕೆ ಯಾಕೆ ಕೋಪ'' ಹಲ್ಕಿರಿದರು.

''ಇನ್ನೇನು ಮತ್ತೆ, ನನ್ನ ಚುಟುಕಿಗೆ ಒಂದು ಸಾಲು ಪ್ರತಿಕ್ರಿಯೆ ಬರೆಯಕ್ಕೂ ಬರಲ್ಲ ಬಿಡಿ ನಿಮಗೆ'' ರೇಗಿದೆ.

''ಓಹ್ ಇದೇನು ನನಗೆ ಕಾಮೆಂಟ್ ಬರೆಯಲು ಬರೋದೆ ಇಲ್ಲ ಅಂತ ಇದ್ಯಲ್ಲಾ! ನಾನು ಕಾಮೆಂಟ್ ಹಾಕಿದಷ್ಟು ನೀನು ಲೈಕ್ ಒತ್ತಿರಲಿಕ್ಕಿಲ್ಲಾ ಗೊತ್ತಾ?'' (ನಾನು ಕಾಫೀ ಕುಡಿದಷ್ಟು ನೀನು ನೀರು ಕುಡಿದಿರಲಿಕ್ಕಿಲ್ಲ ಅನ್ನುವುದನ್ನು ಎಲ್ಲೋ ಕೇಳಿದ್ದೆ ಆದರೆ ಇದು ಈಗೀಗ ಬಳಕೆಯಲ್ಲಿರುವ ಹೊಸ ಪ್ರಯೋಗ ಅನಿಸುತ್ತೆ!) ಅನ್ನುತ್ತಾ ಆಗತಾನೆ ಫೇಸ್‌ಬುಕ್ ಬಳಕೆ ಆರಂಭಿಸಿದ ನನಗೆ ತಮಾಷೆ ಮಾಡಿದರೂ ನನ್ನ ಹತ್ತಿರ ಬಂದು ಸಮಾಧಾನ ಮಾಡಿ ''ನಿಜ ಹೇಳ್ಬೇಕು ಅಂದ್ರೆ ನಿನ್ನ ಚುಟುಕು ಬಹಳ ಅರ್ಥಗರ್ಭಿತವಾಗಿತ್ತು ಕಣೆ, ನನಗೆ ಏನು ಬರೀಬೇಕು ಅಂತ ಗೊತ್ತಾಗ್ಲೇ ಇಲ್ಲ! ಹೋಗಲಿ ಬಿಡು ಏನ್ ಕಾಮೆಂಟು ಬರೀಲಿ ಅಂಥ ಹೇಳಿಕೊಡು ಹಾಗೆ ಬರೀತೀನಿ ಆಯ್ತಾ, ಬೇಜಾರ್ ಮಾಡ್ಕೊಬೇಡ'' ಅಂದಾಗ ನನ್ನ ಮುಖದಲ್ಲೂ ಅರ್ಥಗರ್ಭಿತ ಭಾವನೆಗಳೇ!

ಯಥಾಪ್ರಕಾರ ಅಂದೂ ಅಮ್ಮ ಬೇಗನೆ ಊಟ ಮುಗಿಸಿ ರಾಜ ತೆರೆದುಕೊಟ್ಟ ಫೇಸ್‌ಬುಕ್ಕಿನಲ್ಲಿ ಮುಖ ಹುದುಗಿಸಿ ಆಸಕ್ತಿಯಿಂದ ಕುಳಿತಿದ್ದರು. ಆಗಾ ಅವರ ಗಮನ ಸೆಳೆದಿದ್ದು ಆಗಷ್ಟೇ ತೇಲಿ ಬಂದ ತಮ್ಮ ಅಣ್ಣನ ಪ್ರವಾಸದ ಫೋಟೋಗಳು! ಅವುಗಳನ್ನ ನೋಡಿದಾಗ ಅಮ್ಮನ ಖುಷಿ ಹೇಳತೀರದು! ''ನೋಡ್ರಿ ಎಷ್ಟು ಚೆನ್ನಾಗಿ ಉತ್ತರ ಭಾರತ ಪ್ರವಾಸಕ್ಕೆ ಕರ್ಕೊಂಡ್ ಹೋಗಿದ್ದಾನೆ ನಮ್ಮ ಅಣ್ಣ, ಅತ್ತಿಗೇನಾ'' ಅಂತ ಅಲ್ಲೇ ತಮ್ಮ ಕನ್ನಡಕ ತೆಗೆದುಕೊಂಡು ಹೋಗಲು ಬಂದ ಅಪ್ಪನಿಗೆ ತೋರಿಸಿದಾಗ, ಅಪ್ಪ ''ಅಯ್ಯೋ ಇರು ಮಹರಾಯ್ತಿ ನನ್ನ ಕನ್ನಡಕ ಸಿಗದೇ ಒದ್ದಾಡ್ತಾ ಇದ್ದೀನಿ'' ಎಂದು ಮತ್ತೆ ತಮ್ಮ ಹುಡುಕಾಟ ಮುಂದುವರೆಸಿದರು! ಅವರ ಈ ಹುಡುಕಾಟ ನೋಡ್ತಾ ಇದ್ದ ನಾನು ಸುಮ್ಮನಿರದೆ.

*ಎಲ್ಲಾದರೂ ಇರು*

*ಎಂತಾದರೂ ಇರು*

*ಎಂದೆಂದೂ ನೀನು*

*ಹುಡುಕಿದಾಗ ತಟ್ಟನೆ*

*ಸಿಗುವ ಕನ್ನಡಕವಾಗಿರು*

-★★★--★★★--★★★--★★★--★★★--★★★--★★★--★★★--★★★--★★★-

**ಭಾರತದಲ್ಲೇ ಮೊತ್ತ ಮೊದಲು ವಿದ್ಯುತ್ ಪಡೆದ ಕನ್ನಡ ನಾಡಿನ ರಾಜಧಾನಿ - ಬೆಂಗಳೂರು**

ಎಂದು ಅಪ್ಪನ ಕನ್ನಡಕದ ಕುರಿತು ಎರಡು ಸಾಲು ದಿಢೀರ್ ಹನಿಗವನ ಹೇಳಿ ರೇಗಿಸಿದರೂ, ಕ್ಷಣದಲ್ಲೇ ಮರುಕ ಪಟ್ಟು ನಾನು ಅತ್ತಿತ್ತ ಕಣ್ಣಾಡಿಸಿದೆ. ಪೇಪರ್ ಓದುತ್ತಾ ಅದರೊಳಗೇ ತಮ್ಮ ಕನ್ನಡಕವನ್ನೂ ಸೇರಿಸಿ ಪೇಪರ್ ಮಡಚಿಟ್ಟಿದ್ದರು! ಹಾಗಾಗಿ ಅದೂ ಕೂಡ ಪೇಪರ್ ಓದುತ್ತಾ ಒಳಗೆ ಕುಳಿತಿತ್ತು!

ಅಪ್ಪ ತಮ್ಮ ಕನ್ನಡಕ ಸಿಕ್ಕ ಖುಷಿಗೆ ಅದನ್ನ ಸರಿಯಾಗಿ ಏರಿಸಿಕೊಂಡು ಸ್ಪಷ್ಟವಾಗಿ ಅಮ್ಮ ತೋರಿಸುತ್ತಿದ್ದ ಅವರ ಅಣ್ಣ-ಅತ್ತಿಗೆಯ ಪ್ರವಾಸದ ಫೋಟೋಗಳತ್ತ ದೃಷ್ಟಿ ಹಾಯಿಸಿ ''ಓಹ್ ಹೌದಲ್ಲ! ಚೆನ್ನಾಗಿವೆ! ಆದರೆ ಹೋದ ತಿಂಗಳು ನಮ್ಮ ಷಷ್ಟಬ್ದಿ ಕಾರ್ಯಕ್ರಮಕ್ಕೆ ಆಮಂತ್ರಣ ಕೊಟ್ಟಾಗ ನಿಮ್ಮ ಅಣ್ಣ ''ದಯವಿಟ್ಟು ಕ್ಷಮಿಸಿ ಭಾವ, ಸಮಾರಂಭಕ್ಕೆ ಬರಕ್ಕಾಗಲ್ಲ, ಸಿಕ್ಕಾಪಟ್ಟೆ ಕತ್ತುನೋವು, ಕುತ್ತಿಗೆಗೆ ಬೆಲ್ಟ್ ಹಾಕಿ ಕೂಡ್ಸಿದ್ದಾರೆ'' ಅಂದಿದ್ರಲ್ಲಾ, ಈಗ ನೋಡಿದ್ರೆ ಹಾಯಾಗಿ ಉತ್ತರ ಭಾರತ ಪ್ರವಾಸ ಮಾಡ್ತಾ ಇದ್ದಾರಲ್ಲ'' ಅಂತ ತಮ್ಮ ಹುಸಿ ಕೋಪವನ್ನು ಪ್ರದರ್ಶಿಸಿದಾಗ, ''ಅಯ್ಯೋ ಅದೇರಿ! ಅತ್ತಿಗೆ, ಅಣ್ಣನ ಕತ್ತು ನೋವು ವಾಸಿ ಆದ್ರೆ ದೆಹಲಿ ಹತ್ರ (ತಾವು ನೋಡದೆ ಇರುವ!) ಮಾನಸಾ ದೇವಿ ಮಂದಿರಕ್ಕೆ ಬಂದು ಸೀರೆ ಉಡಿಸ್ತೀನಿ ಅಂತ ಬೇಡ್ಕೊಂಡಿದ್ರಂತೆ, ಹಾಗೆ ದಾರೀಲಿ ದೆಹಲಿ, ಆಗ್ರಾ ಎಲ್ಲ ನೋಡ್ಕೊಂಡ್ ಬಂದಿದ್ದಾರೆ ಅಷ್ಟೇ'' ಅಪ್ಪನನ್ನು ಸುಮ್ಮನಾಗಿಸುತ್ತಾ ಬಂತು ಅಮ್ಮನ ಸಮಜಾಯಿಷಿ.''

ಅಪ್ಪ ನಗುತ್ತ ''ಚೆನ್ನಾಗಿದೆ ಕಣೆ ನಿನ್ನ ಒಕ್ಕಣೆ, ನನ್ನ ಮಂಡಿ ನೋವು ಕಡಿಮೆ ಆದ್ರೆ ಕಾಶ್ಮೀರದಲ್ಲಿ ಇರೋ ದೇವಸ್ಥಾನಕ್ಕೆ ಬಂದು ಸೇವೆ ಮಾಡ್ತೀನಿ ಅಂತ ನೀನೂ ಬೇಡ್ಕೊಳ್ಳೇ, ಆ ಊರು ನೋಡಿದಹಾಗೆ ಆಗುತ್ತೆ'' ರೇಗಿಸಿದಾಗ ಅಮ್ಮನಿಗೆ ಹುಸಿ ಕೋಪ! ''ಅಯ್ಯೋ ನಿಮ್ಮದೇನು ಕಡಿಮೆ ಆಗೋ ಸಮಸ್ಯೆ ಅಲ್ಲಬಿಡಿ, ಹೋಗ್ಲಿ ನಮ್ಮ ತಿರುಪತಿ ತಿಮ್ಮಪ್ಪನಿಗೆ ನಿಮ್ಮ ಮಂಡಿ ನೋವು ವಾಸಿ ಆದರೆ ನೀವು ಬೆಟ್ಟ ಹತ್ತಿ ದರ್ಶನ ಮಾಡ್ತೀರ ಅಂತ ಹರಕೆ ಹೊತ್ಕೊಳ್ತೀನಿ ಬಿಡಿ'' ಅಮ್ಮ ತಮಾಷೆ ಮಾಡುತ್ತಾ ಅಪ್ಪನಿಗೆ ಲೈಟಾಗಿ ಶಾಕ್ ಕೊಟ್ಟು ಫೇಸ್‌ಬುಕ್ ವೀಕ್ಷಣೆಯನ್ನು ಮುಂದುವರೆಸಿದಾಗ, ನಮ್ಮ ಚಿಕ್ಕಪ್ಪ (ಅಪ್ಪನ ತಮ್ಮ) ಈಗಿರುವ ಕಾರಿಗೆ ಜೊತೆಯಾಗಲೆಂದು ಇರಬೇಕು, ಮತ್ತೊಂದು ಹೊಚ್ಚ ಹೊಸಾ ಮಾಡೆಲ್ ಕಾರನ್ನು ಖರೀದಿಸಿ, ಶಾಸ್ತ್ರೋಕ್ತವಾಗಿ ಕಾರಿಗೆ ಪೂಜೆ ಮಾಡಿದ ಕೆಲವು ಫೋಟೋಗಳು ಕಂಡವು. ಅಮ್ಮನೂ ತಮ್ಮ ಮೈದುನನ ಹೊಸ ದರಬಾರ್ ನೋಡುವುದರಲ್ಲಿ ಮುಳುಗಿದರು.

ಅಪ್ಪಾ ಕೂಡ, ಅವುಗಳನ್ನು ನೋಡಿ ಎಲ್ಲಿಲ್ಲದ ಉತ್ಸಾಹದಿಂದ ''ನೋಡೇ! ಎಷ್ಟು ಚೆನ್ನಾಗಿ ಕಾರಿನ ಪೂಜೆ ಮಾಡಿದ್ದಾನೆ, ನಮ್ಮ ಶ್ರೀಕಾಂತು. ಕಾರಿನ ಕಲರ್ರೂ ತುಂಬಾ ಚೆನ್ನಾಗಿದೆ, ಅಲ್ವೇನೆ ಸೀತಾ?'' ಅಂದಾಗ ಅಮ್ಮ ''ಹೌದು ತುಂಬಾ ಚೆನ್ನಾಗಿದೆ ರೀ. ಕಾರು, ಕಲರ್ರೂ ಎರಡೂ, ಆದರೆ ಹೋದವರ್ಷ ನಮ್ಮ ಪ್ರೇಮಿ ಮದುವೆಗೆ ಸ್ವಲ್ಪ ಸಹಾಯ ಮಾಡಿ ಅಂದ್ರೆ, ''ಅಯ್ಯೋ ಮನೆ ಕಟ್ಟಿದ ಸಾಲಾನೇ ತುಂಬಾ ಉಳಕೊಂಡಿದೆ ದಯವಿಟ್ಟು ಏನೂ ತಿಳ್ಕೊಬೇಡಿ'' ಅಂತ ಕೈ

-★★★--★★★--★★★--★★★--★★★--★★★--★★★--★★★--★★★--★★★-


**ಭಾರತ ಕ್ರಿಕೆಟ್ ತಂಡದ ನಾಯಕತ್ವ ವಹಿಸಿದ ಮೊದಲ ಕನ್ನಡಿಗ - ಜಿ.ಆರ್. ವಿಶ್ವನಾಥ್**

ಎತ್ತಿಬಿಟ್ರಲ್ಲಾ ರೀ! ಈಗ ನೋಡಿದ್ರೆ ಕಾರ್ ಮೇಲೆ ಕಾರ್ ಖರೀದಿ ಮಾಡ್ತಾ ಇದ್ದಾರಲ್ಲ'' ಎನ್ನುತ್ತಾ ನಮ್ಮ ಚಿಕ್ಕಪ್ಪ ನನ್ನ ಕೊನೆ ತಂಗಿಯ ಮದುವೆ ಸಮಯದಲ್ಲಿ ಹಣದ ಸಹಾಯ ಕೋರಿದಾಗ ಮಾಡದೇ ತಪ್ಪಿಸಿಕೊಂಡಿದನ್ನು ತಕ್ಷಣ ಸಕಾಲಿಕವಾಗಿ ನೆನಪು ಮಾಡಿಕೊಟ್ಟರು! ''ಹೌದು ಕಣೆ ನೀನು ಹೇಳೋದೇನೋ ನಿಜ! ಮನೆಗೆ ಸಾಲ ಮಾಡಿದ ಹಾಗೆ ಈ ಕಾರನ್ನೂ ಪಾಪಾ ಸಾಲಾ ಮಾಡೇ ತೊಗೊಂಡಿದ್ದಾನಂತೆ ಕಣೆ, ನಮ್ಮ ಸೀನು ಹೇಳ್ದ'' ಅನ್ನುತ್ತಾ ಅಪ್ಪ, ಅಮ್ಮ ಇನ್ನೂ ಹಳೆಯ ನೆನಪಿನ ಲೋಕಕ್ಕೆ ಜಾರುವ ಮುನ್ನವೇ ಮುಂಜಾಗ್ರತಾ ಕ್ರಮವಾಗಿ ಅಲ್ಲಿಂದೆದ್ದು ಮೆಲ್ಲನೆ ತಮ್ಮ ರೂಮಿಗೆ ಜಾರಿಕೊಂಡರು!

ಅಮ್ಮ ಹುಸಿ ನಗುತ್ತಾ ''ನೋಡ್ದೇನಮ್ಮಾ ನಿಮ್ಮ ತಂದೆ ಹೇಗೆ ಜಾರ್ಕೊಂಡ್ ಬಿಟ್ಟರು! ಆದರೂ ನೀ ಏನೇ ಹೇಳು ಈ ಫೇಸ್‌ಬುಕ್ ಮುಂದೆ ಕುಳಿತರೆ ನಮ್ಮಗಳ ತಲೇನೂ ಏರು ಪೇರು, ಸಮಯದ ಅರಿವೂ ಇರಲ್ಲ! ಅತಿಯಾಗಿ ಹಚ್ಚಿಕ್ಕೊಂಡು ಬಿಟ್ಟರೆ ಕೆಲವೊಮ್ಮೆ ಮನಸ್ಸಿಗೂ ಹಿಂಸೆ, ಇದರ ಬಳಕೆ ಇತಿ ಮಿತಿಯಲ್ಲಿದ್ದು ನಮ್ಮ ಒಳತಿಗಾಗಿ ಉಪಯೋಗಿಸಿಕೊಂಡರೆ ಚೆನ್ನ ಅಲ್ವೇನೆ, ನೋಡು ಆಗಲೇ ಟೈಮ್ ಆರು ಗಂಟೆ, ನಮ್ಮ ಸಾಯಂಕಾಲದ ಭಜನೆ ಕಾರ್ಯಕ್ರಮದ ಸಮಯ ಆಗ್ತಾ ಬಂತು'' ಅಂತ ಹೇಳಿ ಏನೋ ನೆನಪಿಸಿಕೊಂಡವರಂತೆ ನೀನು ನಡಿ ನಾನು ರಾಜನಿಗೆ ಹೇಳ್ಬಿಟ್ಟಿನಿ, ನಾನು ಇವತ್ತು ಬರೆದ ಕಾಮೆಂಟ್‌ಗೆ ಏನು ಉತ್ತರ ಬಂತು ಅಂತಾ ನೀನೇ ಸ್ವಲ್ಪ ನೋಡಿ ಹೇಳಿಬಿಡಪ್ಪ ಅಂತ'' ಅನ್ನುತ್ತಾ ಎದ್ದು ಒಳ ನಡೆದರು.

❋

---




-★★★--★★★--★★★--★★★--★★★--★★★--★★★--★★★--★★★--★★★-

**ಶ್ರೀ ಕೃಷ್ಣರಾಜ ಒಡೆಯರು ಕನ್ನಡ ಸಾಹಿತ್ಯ ಪರಿಷತ್ತನ್ನು ಸ್ಥಾಪಿಸಿದ್ದು**
**- ಕ್ರಿ.ಶ. 1915ರಲ್ಲಿ**


# ತುಂತುರು ತುಂತುರು ತುಂತುರು ತುಂತುರು ತುಂತುರು ತುಂತುರು ತುಂತುರು

– ದಂಸಳಿ

- ಸಚಿನ್ ಕ್ರಿಕೆಟ್ ಬಿಟ್ಟಿರಬಹುದು ಆದರೆ ಕ್ರಿಕೆಟ್ ಸಚಿನ್‌ರನ್ನು ಬಿಡುವುದೆ?
- ಮೆಟ್ರೊಸಿಟಿಯಲ್ಲಿ ಸಿಂಪ್ಲಿಸಿಟಿ ಕಷ್ಟವೇನಲ್ಲ ಎನ್ನುತ್ತಾರೆ ಗಾಂಧಿವಾದಿಯೊಬ್ಬರು.
- ಎಲ್ಲ ಹಕ್ಕಿಗಳಿಗೂ ದೇವರು ಆಹಾರ ಕೊಡುತ್ತಾನೆ. ಆದರೆ ಅದನ್ನು ಗೂಡಿನಲ್ಲಿ ತಂದುಕೊಡುವುದಿಲ್ಲ.
- ಅರಿವು ಎಂಬುದು ಅರಳಿ ಹೂ. ಅದು ಬಾಡುವುದಿಲ್ಲ.
- *If you want to know what god thinks of money just look at the people he gave it to.*
- ಸಂಗೀತ ಪ್ರಾರಂಭವಾಗುವುದು ಇಮಿಟೇಷನ್‌ನಿಂದ; ಸ್ವಲ್ಪ ಕಾಲ ರಿಪಿಟಿಷನ್ ನಂತರ ಆಗೋದು ಕ್ರಿಯೇಷನ್.
- ಕಲಿಸಬೇಕಾದರೆ ಕಲಿಸುವವನಿಗೆ ಮೊದಲು ಕಲಿಯುವ ಗುಣ ಇರಬೇಕು.

**ಮೆಲುಕು ಹಾಕುವಂತಹ ಮಾತುಗಳ ಗುಚ್ಛ**

- ಬೇರೇ ಮರದ ಬಾಯಿ. ಏಕೆಂದರೆ ಕೆಳಗೆ ನೀರು ಸುರಿದರೆ ಮೇಲೆ ಹಸಿರು ಕೊನರುತ್ತದೆ.
- *It is to get a loan unless you need it.*
- ಒಂದು ಬಾಗಿಲು ಹಾಕಿದಾಗ ಇನ್ನೊಂದು ತೆರೆದರೆ ಆಗ ನೀವು ಒಂದು ಕೆಟ್ಟ ಸೆಕೆಂಡ್ ಹ್ಯಾಂಡ್ ಕಾರ್ ಕೊಂಡಿದ್ದೀರಿ ಎಂದರ್ಥ.
- ನಾನು ಏಕಾಂತದಲ್ಲಿದ್ದಾಗಲೂ ನನಗೆ ನಾನೇ ಸುಳ್ಳು ಹೇಳಿಕೊಳ್ಳುವುದಾದರೆ ನನ್ನನ್ನು ಯಾರೂ ರಕ್ಷಿಸಲು ಸಾಧ್ಯವಾಗುವುದಿಲ್ಲ.
- *It is easy to get up quickly when you have overslept.*
- ತಾಯಿಯ ಗರ್ಭ = ಮಗುವಿನ ಅರಮನೆ.
- ಒಂಭತ್ತು ಮಂದಿಯನ್ನು ಮದುವೆಯಾದರೂ ಒಂದೇ ತಿಂಗಳಿನಲ್ಲಿ ಮಗು ಪಡೆಯಲು ಸಾಧ್ಯವಾಗುವುದಿಲ್ಲ.
- *Some of us may have the gift of the gab but that does not mean everyone else should be mum.*
- ನಿಮ್ಮ ಅಗತ್ಯಗಳು ಅಲ್ಪ ಎಂದಾದರೆ ನಿಮ್ಮ ಬಳಿ ಸಾಕಷ್ಟು ಇದೆ ಎಂದೇ ಅರ್ಥ.
- ಎಣ್ಣೆ ಹಾಕಿದ ಮೇಲೆ ಮನುಷ್ಯ ದೇವರಿದ್ದಂತೆ ಸತ್ಯ ಹೇಳ್ತಾನೆ. ಸ್ವಲ್ಪ ವಾಲಾಡ್ತಾನೆ. ವಾಲಾಡೊ ದೇವರು ಎನ್ನಬಹುದೆ?




ಕಿವಿ – ಕೇಳುವ ಅಂಗವೇ ಆದರೂ ಅದರ ಒಂದು ಭಾಗ ನಮ್ಮ ದೇಹದ ಸಮತೋಲನ ಮಾಡುವ ಕೆಲಸ ನಿಭಾಯಿಸುತ್ತದೆ. ಕೇಳಿಸುವ ಭಾಗಕ್ಕೆ ತೊಂದರೆಯಾದರೆ ಕಿವುಡುತನ ಬರುತ್ತದೆ, ಹಾಗೆಯೇ ಉಳಿದ ಭಾಗಕ್ಕೆ ತೊಂದರೆಯಾದರೆ ತಲೆಸುತ್ತು ಕಿವಿಮೊರೆತ ಉಂಟಾಗುತ್ತದೆ. ಕಿವಿಮೊರೆತಕ್ಕೆ ಉಳಿದಂತೆ ಹಲವಾರು ಕಾರಣಗಳು ಇದ್ದರೂ ಈ ಸೂಕ್ಷ್ಮವಾದ ಅಂಗದ ತೊಂದರೆಯೇ ಬಹುಮಟ್ಟಿನ ಕಾರಣ. ಬಹಳ ಸಲ ಈ ತೊಂದರೆ ಔಷಧಿಗೆ ಒಗ್ಗದು. ಮೊರೆತ ಮುಚ್ಚುವಂತೆ ಶಬ್ದವನ್ನು ಹಿಯರಿಂಗ್ ಏಡ್ ಮೂಲಕ ಕೊಡಬೇಕಾಗುತ್ತದೆ. ಸದ್ಯಕ್ಕೆ ಅದೇ ಉತ್ತರ. ಕಿವಿಯ ಸೂಕ್ಷ್ಮತೆ ಕಡಿಮೆಯಾದ ನಂತರ ಹಿಯರಿಂಗ್ ಏಡ್ ಧರಿಸಿ ಎಲ್ಲರಂತೆಯೇ ಮಾತಿನ ಚಟುವಟಿಕೆಯಲ್ಲಿ ಭಾಗವಹಿಸಬೇಕು, ಅದು ಸಾಮಾನ್ಯ ಜೀವನ.

**ಡಾ|| ಜಿ. ಪುರುಷೋತ್ತಮ** ಇಡಿ.ಡಿ.

**ವಾಕ್ – ಶ್ರವಣದೋಷ ತಜ್ಞ, ವಿಸ್ಪರ್ ವಾಕ್ – ಶ್ರವಣ ಕೇಂದ್ರ**

# ಒಂದೇ ಒಂದು ಮುಗುಳ್ನಗು...

**- ಎಚ್. ಗೋಪಾಲಕೃಷ್ಣ**

ಪ್ರತಿದಿವಸ ವಾಕಿಂಗು ಎಂದು ಹೋಗುವವರಿಗೆ ಬಹಳ ಅಪರೂಪದ ಅನುಭವಗಳು ಆಗುತ್ತಲೇ ಇರುತ್ತದೆ. ಮೊನ್ನೆ ಒಂದು ಇಂಥಹ ಅಪರೂಪದ ಅನುಭವ ನನ್ನ ಗೆಳೆಯರಿಗೆ ಆಯಿತು. ಅದನ್ನು ಅವರು ವಿವರಿಸಿದ್ದು ಹೀಗೆ:

ಪಾರ್ಕುಗಳಲ್ಲಿ ವಾಕಿಂಗು ಹೋಗುವ ಜನರಿಗೆ ಒಳಹೋಗಲು ಮತ್ತು ಹೊರಬರಲು ಒಂದು ಗೇಟು ಇರುತ್ತೆ. ವಾಕಿಂಗು ಮಾಡುವವರಲ್ಲಿ ಒಂದು ವಿಶೇಷವೆಂದರೆ ನೂರಕ್ಕೆ ತೊಂಬತ್ತು ಮಂದಿ ದೇವಸ್ಥಾನಗಳಲ್ಲಿ ಮಾಡುವ ಹಾಗೆ ಎಡಗಡೆಯಿಂದ ಬಲಗಡೆಗೆ ಪ್ರದಕ್ಷಿಣಾ ರೂಪದಲ್ಲಿಯೇ ಸುತ್ತು ಹಾಕುವವರು. ಐದು ಜನ ಮಾತ್ರಾ ಅಪ್ರದಕ್ಷಿಣೆ ಹಾಕುತ್ತಾರೆ. ಇದು ಯಾಕೆ ಅಂತ ಗೊತ್ತಿಲ್ಲ! ಪ್ರದಕ್ಷಿಣಾ ರೀತಿಯಲ್ಲಿ ಸುತ್ತು ಹಾಕಬೇಕಾದರೆ ಒಬ್ಬರ ಬೆನ್ನು ಮತ್ತೊಬ್ಬರಿಗೆ ಕಾಣಿಸುತ್ತೆ, ಮುಖ ಕಾಣಿಸದು. ಆದರಿಂದ ಒಬ್ಬರಿಗೆ ಒಬ್ಬರ ಮುಖ ಪರಿಚಯವೂ ಇರದು!

ಆದರೆ ಬಲಭಾಗದಿಂದ ವಾಕಿಂಗು ಹೋಗುವವರಿಗೆ ಬರೇ ಬೆನ್ನು ನೋಡುವ ಪರಿಸ್ಥಿತಿ ಇರದು. ಇವರದ್ದು ಇನ್ನೂ ಒಂದು ಹೆಚ್ಚಳ ಅಂದರೆ ಎದುರಿಗೆ ಸಾಗುವ ಎಲ್ಲರ ಮುಖ ಪರಿಚಯ ಇರುತ್ತೆ.

ನನಗೂ ಮೊದಲು ಪ್ರದಕ್ಷಿಣಾ ರೂಪದ ಓಡಾಟದ ಹುಚ್ಚು ಇತ್ತು. ಅಪ್ರದಕ್ಷಿಣೆ ಹಾಕಬಾರದು ಎನ್ನುವ ಮನೋಭಾವ ರೂಪಿಸಿಕೊಂಡುಬಿಟ್ಟಿದ್ದೆ. ಮನುಷ್ಯರ ಬೆನ್ನು ನೋಡಿಕೊಂಡು ಓಡಾಡುವ ವ್ಯವಸ್ಥೆ ಯಾಕೋ ಸರಿ ಇಲ್ಲ ಅನಿಸಿತು. ಅಪ್ರದಕ್ಷಿಣಾ ವಾಕಿಂಗು ಶುರು ಮಾಡಿದೆ. ನನ್ನ ಥರಹವೇ ಇನ್ನೂ ಮೂರೋ ನಾಲ್ಕು ಜನ ಹೀಗೆ ಮಿಕ್ಕವರಿಗೆ ವಿರುದ್ಧ ದಿಕ್ಕಿನಲ್ಲಿ ಹೋಗುತ್ತಿದ್ದವರು.

ಮೊದಲು ಒಂದೆರೆಡು ವಾರ ಎದುರು ದಿಕ್ಕಿನಿಂದ ಬರುವ ಜನರ ಮುಖದಲ್ಲಿ ಕೋಪ ಅಸಹನೆ ಒಂದು ರೀತಿ ನಂಜು ಕಾಣಿಸುತ್ತಿದೆ ಅನಿಸಿತ್ತು. ಮನೆಯ ಸಕಲ ತಾಪತ್ರಯಗಳನ್ನೂ ತಲೆಮೇಲೆ ಹೊತ್ತು ಇಲ್ಲಿ ತಂದಿದ್ದಾರೆ, ಪಾಪ ಅದೇನು ಕಷ್ಟವೋ ಮನೆಯಲ್ಲಿ ಅಂತ ಅನಿಸುತ್ತಿತ್ತು. ಇವರೆಲ್ಲಾ ತಾಪತ್ರಯ ಹೊತ್ತು ಓಡಾಡುವ ಹಾಗಿರುವ ಮುಖ ಹೊತ್ತಿದ್ದರೆ, ನಾನು ಯಾವ ಮುಖ ಹೊತ್ತಿರಬಹುದು ಅನ್ನೋ ಯೋಚನೆ ಸಹ ಮನಸ್ಸಿನಲ್ಲಿ ಹಾದು

-★★★--★★★--★★★--★★★--★★★--★★★--★★★--★★★--★★★--★★★-

**ಕನ್ನಡದ ಮೊದಲ ಪತ್ರಿಕೆ - ಡಾ. ಹರ್ಮನ್ ಮೊಗ್ಲಿಂಗ್ ಅವರ**
**- ಮಂಗಳೂರು ಸಮಾಚಾರ**

ಹೋಯಿತು. ಈ ಯೋಚನೆ ಯಾರ ಹತ್ತಿರ ತೋಡಿಕೊಳ್ಳುವುದು? ನನ್ನ ಮುಖವೂ ಹಾಗೇ ಇದೆಯಾ? ಮುಖ ಸಿಂಡರಿಸಿಕೊಂಡು, ಇಡೀ ಜಗತ್ತು ನನ್ನ ವಿರುದ್ಧ ನಿಂತಿದೆ,ಇಡೀ ಪ್ರಪಂಚ ನನಗೆ ಮೋಸ ಮಾಡಿದೆ ಎನ್ನುವ ಭಾವನೆಯೊಂದಿಗೆ ನಾನೂ ಇತರರ ಹಾಗೆ ನರಳುತ್ತಿದ್ದೇನೆಯೇ?

ಸರಿ ಇದನ್ನ ನನಗೆ ಆಪ್ತರು ಅನಿಸಿಕೊಂಡ ಒಬ್ಬರ ಹತ್ತಿರ ಹೇಳಿದೆ. ಅವರೂ ಸಹ ವಾಕಿಂಗು ಮಾಡುವ ಗುಂಪಿಗೆ ಸೇರಿದವರು, ದೇವಸ್ಥಾನ ಸುತ್ತು ಬರುವ ಹಾಗೆ ಬರುವವರು! ಹೌದಲ್ರೀ ನಮ್ಮೆಲ್ಲರ ಮುಖದಲ್ಲೂ ದುಗುಡ, ಈರ್ಷ್ಯೆ, ಕೋಪ, ತಾಪ ಇವೆಲ್ಲವೂ ಇರಬೇಕು ಅಂತ ನನಗೂ ಅನಿಸುತ್ತೆ. ನಾಳೆಯಿಂದ ಒಂದು ಕೆಲಸ ಮಾಡೋಣ ಬನ್ನಿ... ಅಂದರು.

ಮಾರನೇ ದಿವಸ ಅವರೂ ನಾನೂ ಬೆಳಿಗ್ಗೆ ವಾಕಿಂಗಿನ ಸಂಗಾತಿಗಳು. ಮೊದಲ ವಾರ ಎದುರು ದಿಕ್ಕಿನಿಂದ ಬರುವ ಜನರನ್ನು ಗಮನಿಸುವುದೇ ನಮ್ಮ ಕೆಲಸ. ಇಬ್ಬರು ವಯಸ್ಸಾದ ಹೆಂಗಸರು ಜತೆಯಲ್ಲಿ ಬರ್ತಿದಾರೆ ಅಂದರೆ ಅವರ ಕಾಮನ್ ಪ್ರಾಬ್ಲಮ್ಮು ಅವರ ಸೊಸೆಯರು, ಇಬ್ಬರು ಹೊಸದಾಗಿ ಮದುವೆಯಾಗಿರುವ ಹುಡುಗಿಯರು ಬಂದರೆ ಅವರ ಕಾಮನ್ ಪ್ರಾಬ್ಲಮ್ಮು ಅವರ ಗಂಡ ಹಾಗೂ ಅತ್ತೆ, ಇಬ್ಬರು ಮುದುಕರು ಜತೆಯಾಗಿ ಬಂದರೆ ಅವರ ಕಾಮನ್ ಪ್ರಾಬ್ಲಮ್ಮು ಅವರ ಯೌವ್ವನದಲ್ಲಿ ಅವರಿಗೆ ಅವರ ಮೇಲಧಿಕಾರಿ ಮಾಡಿದ ಮೋಸ...

ವಾಕಿಂಗಿನ ತಮಾಷೆ ಹೀಗೆ ಮುಂದುವರೀತಿತ್ತೋ ಏನೋ.. ಜನ ವಾಕಿಂಗು ಮಾಡುವುದು ಆರೋಗ್ಯ ಕಾಪಾಡಿಕೊಳ್ಳುವುದಕ್ಕೆ ಅಂತ ನಾವು ತಿಳಿದುಕೊಂಡಿದ್ದು ಸುಳ್ಳು ಅಂತ ಅನಿಸಬೇಕೇ?

ಇದಕ್ಕೂ ಒಂದು ನಾವಲ್ ಉಪಾಯ ಹುಡುಕಿದೆವು. ಎದುರು ಬರುವ ಪ್ರತಿಯೊಬ್ಬರಿಗೂ ನಮಸ್ಕಾರ, ಗುಡ್ ಮಾರ್ನಿಂಗ್, ಆರೋಗ್ಯವೇ... ಹೀಗೆ ವಿಚಾರಿಸುತ್ತಾ ನಮ್ಮ ಓಡಾಟ ಮುಂದುವರೆಸಿದೆವು. ಮೊದಲು ಎರಡು ಮೂರು ದಿವಸ ಯಾವನೋ ಗುರುತು ಪರಿಚಯವಿಲ್ಲದವನು ನಮಸ್ಕಾರ ಅಂತಾನೆ, ಗುಡ್ ಮಾರ್ನಿಂಗ್ ಹೇಳ್ತಾನೆ, ಆರೋಗ್ಯವಾ ಅಂತ ಕೇಳ್ತಾನೆ ಅಂತ ಮೂತಿ ಸೊಟ್ಟ ಮಾಡಿಕೊಂಡು, ಸಿಂಡರಿಸಿಕೊಂಡು ಹನುಮಂತರಾಯನ ಹಾಗೆ ಹೋದವರು ಎರಡು ಮೂರು ದಿವಸ ಅದೇ ಅಭ್ಯಾಸ ಮುಂದುವರಿದ ಹಾಗೆ ಬದಲಾದರು!

ಅವರೂ ನಮಸ್ಕಾರ, ಗುಡ್ ಮಾರ್ನಿಂಗ್, ಆರೋಗ್ಯವೇ... ಚೆನ್ನಾಗಿದ್ದೀರಾ ಅಂತ ಕೇಳಲು ಆರಂಭಿಸಿದರು. ಏನಿವತ್ತು ನೀವು ಲೇಟು? ಅಂತ ನಾವು ತಡವಾಗಿ ಹೋದ ದಿವಸ ಪ್ರಶ್ನೆಯೂ ಕೇಳಿದರು.

-★★★--★★★--★★★--★★★--★★★--★★★--★★★--★★★--★★★--★★★-

**ಬ್ರಿಟೀಷರ ವಿರುದ್ಧ ಮೊಟ್ಟ ಮೊದಲ ಬಾರಿಗೆ ಕಹಳೆ ಊದಿಸಿದ**
**ಕನ್ನಡ ನಾಡಿನ ಊರು - ಕಿತ್ತೂರು**

ಒಬ್ಬರು ಹಿರಿಯ ಹೆಂಗಸರಂತೂ ಅಣ್ಣಾ ಎಷ್ಟು ಸುತ್ತು ಹಾಕ್ತೀರೀ ಅಂತ ಮಾತು ಶುರು ಮಾಡಿದವರು ಅಣ್ಣ ಯಾಕೆ ಎರಡು ದಿವಸ ನೀವು ಬರಲಿಲ್ಲ? ಅಂತ ಕೇಳಬೇಕೇ?

ಈ ಅಭ್ಯಾಸ ಮುಂದುವರೆದ ಹಾಗೆ ವಾಕಿಂಗಿನ ಸ್ನೇಹಿತರೂ ಹೆಚ್ಚಿದ್ದಾರೆ. ಎರಡು ಮೂರು ದಿವಸ ನಾವು ಕಾಣಿಸದಿದ್ದರೆ ಆರೋಗ್ಯ ಚೆನ್ನಾಗಿದೆಯಾ ಯಾಕೆ ನೀವು ಕಾಣಲಿಲ್ಲ? ಅಂತ ಕೇಳುತ್ತಾರೆ. ಹಲವು ಮುದುಕರಂತೂ ಎದುರು ಬಂದಾಗ ಒಂದು ಹೂ ನಗೆಯನ್ನು ಚೆಲ್ಲುತ್ತಾರೆ. ಬೊಚ್ಚು ಬಾಯಿನ ಆ ಹೂನಗೆ ಅವರು ಚೆಲ್ಲಿ ಎಷ್ಟು ವರ್ಷವಾಗಿತ್ತೋ ಅಂತ ನಮಗೆ ಅನಿಸುತ್ತೆ...!

ಬರೇ ಕೆಲವೇ ದಿವಸಗಳ ನಗು ವಿನಿಮಯವಾದರೂ ಮನೆಯ ಸಮಾರಂಭಗಳಿಗೆ ಆತ್ಮೀಯವಾಗಿ ಆಹ್ವಾನಿಸುವ ಗೆಳೆತನ ಬೆಳೆದಿದೆ!

ಒಂದು ನಗು ಎಷ್ಟು ಬದಲಾವಣೆ ತರಬಹುದು ಅಲ್ಲವಾ...?

❋

---

## ಆಗ ಬಿಟ್ಟಿದ್ದೇಕೆ?

ಕೆಲವು ಶಾಲಾ ಮಕ್ಕಳನ್ನು ಪೋಲೀಸ್ ಠಾಣೆಗೆ ಕರೆದೊಯ್ಯಲಾಯಿತು.

ಉದ್ದೇಶ: ಪೋಲೀಸರು ಹೇಗೆ ಕಾರ್ಯ ನಿರ್ವಹಿಸುತ್ತಾರೆ ಎಂಬುದನ್ನು ಪರಿಚಯಿಸಲು ಅಲ್ಲಿದ್ದ ನೋಟೀಸ್ ಬೋರ್ಡಿನ ಮೇಲೆ 10 ಕುಖ್ಯಾತರ ಚಿತ್ರಗಳನ್ನು ಅಂಟಿಸಿದ್ದನ್ನು ನೋಡಿದ ಬಾಲಕನೊಬ್ಬ 'ಅಂಕಲ್ ಇವರು ನಿಮಗೆ ಬೇಕಾಗಿರುವ ವ್ಯಕ್ತಿಗಳೆ?' ಎಂದು ಕೇಳಿದ.

'ಹೌದು ಅವರನ್ನು ಹುಡುಕಲು ಪ್ರಯತ್ನಿಸುತ್ತಿದ್ದೇವೆ?' ಎಂದರು ಇನ್‌ಸ್ಪೆಕ್ಟರ್.

'ಹಾಗಿದ್ದರೆ ಅವರ ಫೋಟೊ ತೆಗೆದಾಗ ಅವರನ್ನು ಏಕೆ ಹಿಡಿಯಲಿಲ್ಲ?' ಎಂದು ಆ ಬಾಲಕ ಕೇಳಿದಾಗ ಇನ್‌ಸ್ಪೆಕ್ಟರ್ ತಬ್ಬಿಬ್ಬಾದರು.

-★★★--★★★--★★★--★★★--★★★--★★★--★★★--★★★--★★★--★★★-

**ಕನ್ನಡ ವಿಮರ್ಶಾ ಗ್ರಂಥಗಳಲ್ಲಿ ಮೊದಲ ಕೃತಿ - ಎಂ.ಎ. ರಾಮಾನುಜ ಐಯ್ಯಂಗಾರ್ ಅವರ ''ಕವಿ ಚಕ್ರವರ್ತಿ ಕವಿ ರನ್ನನ ಜೀವನ ಚರಿತ್ರೆ, ಗ್ರಂಥ ವಿಮರ್ಶೆ, ಇತ್ಯಾದಿ.''**

ಬ್ರೇಕಿಂಗ್ ನ್ಯೂಸ್

# ಶುದ್ಧ ಅಸುದ್ದಿ

- ಎಚ್ಚೆನ್ಎ

## ಚಾಳೀಶ, ಚಾಲೀಸ

**ಲಾ**ಲು ಚಾಲೀಸ ಬಗ್ಗೆ ಕೇಳಿರಬಹುದು. ಅವರ ಅಭಿಮಾನಿಯೊಬ್ಬರು ಅದನ್ನು ಬರೆದರು. ಆದರೇನು ಅವರು, ಅಂದರೆ ಅಭಿಮಾನಿ ಅಲ್ಲ, ಲಾಲೂಜಿ ಜೇಲಿಗೆ ಹೋಗಬೇಕಾಯಿತು. ಈಗವರು ಅಲ್ಲಿ ಒರಿಜಿನಲ್ ಹನುಮಾನ್ ಚಾಲೀಸ ಹೇಳಿಕೊಂಡು ಬಿಡುಗಡೆಗಾಗಿ ಪ್ರಾರ್ಥನೆ ಸಲ್ಲಿಸುತ್ತಿರಬೇಕು. ಇರಲಿ. ಈಗ ಇನ್ನೊಬ್ಬ ಸೆಲೆಬ್ರಿಟಿ ಬಗ್ಗೆ ಒಬ್ಬರು ಚಾಲೀಸ ಬರೆದಿದ್ದಾರೆ. ಅದು ಅಮಿತಾಭ್ ಚಾಲೀಸ. ಅಷ್ಟೇ ಅಲ್ಲ ಈ ಜಯಾ ಪತಿ ಹೆಸರಿನಲ್ಲಿ ಕೊಲ್ಕತ್ತೆಯಲ್ಲಿ ಒಂದು ದೇವಾಲಯವೂ ಇದೆ. ಅಲ್ಲಿ ಅಮಿತಾಭ್‌ಜಿ ವಿಗ್ರಹವಿದ್ದು ಪ್ರತಿ ದಿನ ಒಬ್ಬ ಪೂಜಾರಿ ಪೂಜೆ ಸಲ್ಲಿಸಿ, ಆರತಿ ಮಾಡಿ ಅಮಿತಾಭ್ ಚಾಲೀಸ ಓದಿ ಹೋಗುತ್ತಾರೆ ಎಂದು ಸುದ್ದಿ. ಮುಂದೊಂದು ದಿನ ಈ ಚಾಲೀಸ, ದೇವಾಲಯ ಎಲ್ಲ ನೋಡಿದ ಜನ ಅಮಿತಾಭ್ ಅವರನ್ನು ಸಾಕ್ಷಾತ್ ದೇವರು ಎಂದು ಭಾವಿಸಬಹುದೆ?

**ನೀತಿ: ಚಾಳೀಶ ಇದ್ದವರು - ಕಣ್ಣಿನಲ್ಲಿ ಅಲ್ಲ, ಯೋಚನಾ ಲಹರಿಯಲ್ಲಿ ಇಂತಹ ಚಾಲೀಸಗಳನ್ನು ಬರೆಯಲು ಹೋಗುತ್ತಾರೆ.**

★★★

## ಫೀಲ್ಡ್ ಆಚೆಯ ಸುದ್ದಿ

**ಕ**ಳೆದ ವರ್ಷ ವಿರಾಟ್ ಕೊಹ್ಲಿ ಎಷ್ಟು ರನ್ ಹೊಡೆದರೋ ಗೊತ್ತಿಲ್ಲ ಆದರೆ ಅವರ ಆದಾಯ ಮಾತ್ರ ಎಷ್ಟೆಂದು ಗೊತ್ತಾ 40 ಕೋಟಿ ರೂ. ಪೆಪ್ಸಿ ಟೊಯೊಟ ಮತ್ತು ಸಿಂಥಾಲ್ ಜಾಹೀರಾತುಗಳು ಸೇರಿದಂತೆ. ನನಗೆ ಹೇಗೆ ಗೊತ್ತು ಎಂದು ಕೇಳಿದಿರಾ? ಈಗ ಇಂತಹ ಸುದ್ದಿಯನ್ನೂ ನೀಡುವವರು ಇದ್ದಾರೆ. ಟೆಂಡೂಲ್ಕರ್ ವರಮಾನ ಎಷ್ಟು? ದೋನಿ ಈ ವರ್ಷ ಎಷ್ಟು ಗಳಿಸಲಿದ್ದಾರೆ? ಶಿಖರ್ ಧವನ್‌ಗೆ ಯಾವ ಕಂಪನಿ ಎಷ್ಟು ಕೊಡಲು ಮುಂದೆ ಬಂದಿದೆ? ಇಂತಹ ಫೀಲ್ಡ್ ಆಚೆಯ ಸುದ್ದಿಯನ್ನೂ ಕಲೆ ಹಾಕಿ ಓದುಗರಿಗೆ ಸಿಗುವಂತೆ ಮಾಡಲಾಗುತ್ತಿದೆ. ಹಾಗಿದ್ದರೆ ಇನ್ನು ಮುಂದೆ ಈ ಅತಿರಥ ಮಹಾರಥರ ಕ್ರಿಕೆಟ್ ಅಂಕಿ ಅಂಶಗಳ ಜತೆಗೆ ಇವರ ಹಣಕಾಸಿನ ವ್ಯವಹಾರವನ್ನೂ ಕಾಮೆಂಟರಿ ಸಮಯದಲ್ಲಿ ಬಳಸಿಕೊಳ್ಳುವ ದಿನಗಳು ಬರಬಹುದು. ಅಂದರೆ ಹೀಗೆ: ಹೋದ ವರ್ಷ ಕೊಹ್ಲಿ 10

-★★★--★★★--★★★--★★★--★★★--★★★--★★★--★★★--★★★--★★★-

**ಮೊಟ್ಟಮೊದಲ ಜಾನಪದ ಸಾಹಿತ್ಯದ ಸಂಗ್ರಹ - ರೇವಪ್ಪ ಮಧುರ ಚೆನ್ನ ಮತ್ತು ಸಿಂಪಿ ಲಿಂಗಣ್ಣ ಹೊರತಂದ ''ಗರತಿಯ ಹಾಡು''**

ಸೆಂಚುರಿ ಬಾರಿಸಿರಬಹುದು ಆದರೆ ಅವರ ಆದಾಯ ಮಾತ್ರ 140 ಸೆಂಚುರಿ ರೂಪಾಯಿಗಳಷ್ಟು ಎಂದು ಹರ್ಷ 'ಬೊಗಳೆ' ಬಿಡಬಹುದು.

★★★

**ಟು ಇನ್ ಒನ್**

**ಮೇ**ಲೆ ಟೊಮಾಟೊ, ಕೆಳಗೆ ಆಲೂಗಡ್ಡೆ. ಎಲ್ಲಿ? ಗಿಡದಲ್ಲಿ. ಅಂದರೆ ಒಂದೇ ಗಿಡದಲ್ಲಿ ಈ ಎರಡೂ ತರಕಾರಿಗಳನ್ನು ಬೆಳೆಸಲು ಸಾಧ್ಯ ಎಂದು ಪರಿಣಿತರು ಹೇಳುತ್ತಿದ್ದಾರೆ. ಟೊಮಾಟೊ ಗಿಡಕ್ಕೆ ಆಲೂಗಡ್ಡೆ ಟ್ರೀಟ್‌ಮೆಂಟ್ ಕೊಟ್ಟರೆ ಕಣ್ಣಿಗೆ ಕಾಣುವಂತೆ ಟೊಮಾಟೊ ಹಣ್ಣುಗಳನ್ನು ಮೇಲೆ ಬಿಟ್ಟರೆ ಬೇರಿನಲ್ಲಿ ಆಲೂಗಡ್ಡೆ ಬಿಡುವುದಂತೆ. ಕೆಳಗೆ ಗೆಣಸು ಅಥವಾ ಮೂಲಂಗಿ ಮೇಲೆ ಇನ್ನಾವುದೋ ತರಕಾರಿ ಬೆಳೆಯುವ ಟು ಇನ್ ಒನ್ ಗಿಡಗಳೂ ಬರಬಹುದು ಮುಂದೆ. ಯಾವುದೋ ಸಮಸ್ಯೆಯಾಗಿ ಬೆಳೆ ನಾಶವಾದರೆ ಒಮ್ಮೆಲೇ ಎರಡೂ ಫಸಲು ಕಳೆದುಕೊಳ್ಳದಂತಾಗಲಿ ಎಂಬುದೇ ನಮ್ಮ ಕಳಕಳಿ.

★★★

**ಅಂಬಾಸಿಡರ್ ಎಂಬ ಅತ್ತೆ**

**ಭಾ**ರತದ ರಸ್ತೆಗಳ ಮೇಲೆ ಗುಂಡಿಗಳು ಇಲ್ಲದಿರಬಹುದು ಆದರೆ ಅಂಬಾಸಿಡರ್ ಕಾರ್ ಇಲ್ಲದಿರಲು ಸಾಧ್ಯವೇ ಇಲ್ಲ ಎಂಬ ದಿನಗಳಿದ್ದವು. ಈಗ ಗುಂಡಿಗಳೇನೋ ಇವೆ ಆದರೆ ಅಂಬಾಸಿಡರ್ ಇಲ್ಲ. ಆಗ ಭಾರತದ ಪ್ರಧಾನಿಗಳು ಸಹ ಇದೇ ಕಾರಿನಲ್ಲಿ ಪಯಣಿಸುತ್ತಿದ್ದರು. ಏಕೆಂದರೆ ಬೇರೆ ಕಾರ್ ಭಾರತಕ್ಕೆ ಅಧಿಕೃತವಾಗಿ ಪ್ರವೇಶ ಮಾಡಲು ಅನುಮತಿಯೇ ಇರುತ್ತಿರಲಿಲ್ಲ. ಅಂಬಾಸಿಡರ್‌ಗೆ ಪೈಪೋಟಿ ಎಂದರೆ ಫಿಯಟ್. ಈಗ ಎರಡೂ ಇಲ್ಲ. ಅಂಬಾಸಿಡರ್ ತಯಾರಕರು ದಿವಾಳಿ ಅರ್ಜಿ ಹಾಕಿಕೊಂಡಿದ್ದಾರಂತೆ. ಅಂದರೆ ಅಂಬಾಸಿಡರ್ ಎಂಬ ಅತ್ತೆಯ ಕಾಲ ಮುಗಿಯಿತು.

★★★

**ಗಪ್‌ಚುಪ್ ಖಾನಾವಳಿ**

**ಅ**ಮೆರಿಕದ ಬ್ರೂಕ್ಲಿನ್ ನಗರದಲ್ಲಿರುವ 'ಈಟ್' ನಾಮಾಂಕಿತ ಹೊಟೇಲಿಗೆ ಹೋದರೆ ನೀವು ಅಲ್ಲಿ ಬಾಯಿ ಮುಚ್ಚಿಕೊಂಡು ತಿನ್ನಬೇಕು. ಅರೆ! ಬಾಯಿ ಮುಚ್ಚಿಕೊಂಡು ತಿನ್ನುವುದು ಹೇಗೆ ಎಂಬುದಲ್ಲವೆ ನಿಮ್ಮ ಪ್ರಶ್ನೆ? ಅಂದರೆ ತಿನ್ನುವಾಗ ಸೈಲೆಂಟಾಗಿರಬೇಕು. ಮಾತಾಡುವಂತಿಲ್ಲ. ಮೌನದ ಮೌಲ್ಯಗಳನ್ನು ಎತ್ತಿ ಹಿಡಿಯುವುದೇ ಅದರ ಅಥವಾ 'ಈಟ್' ಒಡೆಯನ ಉದ್ದೇಶ. ಆದರೆ ಊಟ ಕೆಟ್ಟದಾಗಿದ್ದರೂ ಮಾತು ಆಡುವಂತಿಲ್ಲ ಎಂದರೆ ಹೇಗೆ? ಮೌನವಾಗಿ ತಿಂದು ಬಿಲ್ ಕೊಟ್ಟು ಹೋಗಬೇಕೆ?

❋

**ಕನ್ನಡ ಭಾವಗೀತೆಗಳ ರಚನೆಯ ಪ್ರಾರಂಭಿಕ ರೂವಾರಿಗಳು**
**- ಕುವೆಂಪು ಮತ್ತು ಬೇಂದ್ರೆ.**